ಅಖಿಲ ಭಾರತ ಪತ್ರಿಕೆ
ಜನವರಿ 2018



# ಹೊಸ ವರ್ಷ ಆಗಮಿಸುತ್ತಿರುವುದನ್ನು ಕುರಿತು ಘೋಷಣೆ

ಬೆಲೆ : 15/–



*Whatever work you do, do it as perfectly as you can. That is the best service to the Divine in man.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು :**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್.ಡಿ.
ಶಿವಗಿರಿ, ಧಾರವಾಡ – 580007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಆಫ್‌ಸೆಟ್ ಮುದ್ರಣ :**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### “ಹೊಸ ವರ್ಷ ಆಗಮಿಸುತ್ತಿರುವುದನ್ನು ಕುರಿತು ಘೋಷಣೆ”


**ಅನು: ಶ್ರೀ ಪುರುಷೋತ್ತಮ ಗಲಗಲಿ**

ಎರಡು ಹೊಸ ವರ್ಷದ ಪ್ರಾರ್ಥನೆಗಳು 3

**ಅನು: ಡಾ. ಬಿ.ಆರ್. ಭೀಡ**

ಹೊಸ ವರ್ಷದ ಸಂದೇಶಗಳು 6

**ಅನು: ಡಾ. ಕೆ.ಎಸ್. ಆಮೂರ**

ಹೊಸ ವರ್ಷಕ್ಕಾಗಿ ನೀಡಿದ ಸಂದೇಶಗಳಲ್ಲಿ ಕೆಲವೊಂದನ್ನು ಕುರಿತು ಟಿಪ್ಪಣಿಗಳು 15

**ವಾರ್ತಾಪತ್ರ** 39

## (All India Magazine) ಸಂಪಾದಕೀಯ:

ಹೊಸ ವರ್ಷದ ಆಗಮನ ಒಂದು ಸಂಪ್ರದಾಯ. ನಮ್ಮ ಅರಸುವಿಕೆಗಳಲ್ಲಿ ಹಾಗೂ ಹೆಣಗುವಿಕೆಗಳಲ್ಲಿ ಹೊಸ ಪ್ರಾರಂಭ ಮಾಡುವುದಕ್ಕಾಗಿ ಹಾಗೂ ಪೂರಕ ಚಲನೆಯೆಂದು, ನಮ್ಮ ಮುನ್ನಡೆಗೆ ಅಡೆತಡೆಯನ್ನುಂಟು ಮಾಡುವ ಭಾರದ್ದೆನಿಸುವ ಗತಕಾಲವನ್ನು ತೊಡೆದು ಹಾಕಲು ಒಂದು ಸಂದರ್ಭವೆಂದು ಅದನ್ನು ವ್ಯಾವಹಾರಿಕ ಅನುಕೂಲತೆ ಎನ್ನುವ ರೀತಿಯಲ್ಲಿ ಹೊರಳಿಸಬಹುದು. ಅದು ಭವಿಷ್ಯತ್ತಿಗಾಗಿ ಕಾರ್ಯ ಸೂಚಿ ಇರಿಸಬೇಕಾದ ಒಂದು ದಿನ. ಆ ರೀತಿಯಲ್ಲಿ ಶ್ರೀಮಾತೆಯವರು ತಮ್ಮ ದೈವೀ ಸಂಗೀತದೊಂದಿಗೆ ಹಾಗೂ ಬರಲಿರುವ ವಸ್ತು–ವಿಷಯಗಳನ್ನು ಪೂರ್ವಭಾವಿಯಾಗಿ ನೋಡುವ ದೈವೀ ಸಂದೇಶಗಳೊಂದಿಗೆ ಸ್ವಾಗತಿಸುತ್ತಿದ್ದರು. ಅದು ಉಚ್ಚಜೀವನಕ್ಕಾಗಿ ಅಭೀಪ್ಸೆಪಡುವವರಿಗೆ ಬರಲಿರುವ ವರ್ಷದಲ್ಲಿ ಕಾದುಕೊಂಡಿರುವ ಸಾಧ್ಯತೆಗಳನ್ನು ಹಾಗೂ ತೊಂದರೆಗಳನ್ನು ಕುರಿತು ಒಂದು ಸುಳಿವು ಕೊಡುವುದಕ್ಕಾಗಿರುತ್ತಿತ್ತು, ಹೆಚ್ಚು ಮಹತ್ವದ್ದಾಗಿ, ನಮ್ಮ ಬಳಿ ಎಳೆದುಕೊಂಡು ಬರುತ್ತಿರುವ ಭವಿಷ್ಯತ್ತಿನತ್ತ ನಾವು ಕಾಪಾಡಿಕೊಂಡು ಬರಬೇಕಾದ ಮನೋಭಾವ ಕುರಿತು ಆ ಸುಳಿವಿರುತ್ತಿತ್ತು. ಈ ಸಂಚಿಕೆಯಲ್ಲಿ ಶ್ರೀಮಾತೆಯವರು ಕೊಡುತ್ತ ಬಂದಿದ್ದ ಹೊಸ ವರ್ಷ ಕುರಿತು ಸಂದೇಶಗಳನ್ನು ಹಾಗೂ ಅವುಗಳಲ್ಲಿ ಕೆಲವು ಸಂದೇಶಗಳಿಗೆ ನೀಡಿದ್ದ ವಿವರಣೆಯನ್ನು ಪುನಃ ಕೊಡುತ್ತಿದ್ದೇವೆ. ಪ್ರತಿಯೊಂದು ದಿನ, ಪ್ರತಿಯೊಂದು ತಿಂಗಳು, ಪ್ರತಿಯೊಂದು ವರ್ಷ ನಮ್ಮನ್ನು ಎಲ್ಲ ದೈವೀ ವೈಭವ, ಎಲ್ಲ ದೈವೀ ಸೌಂದರ್ಯ, ಎಲ್ಲ ದೈವೀ ಜ್ಞಾನ, ಎಲ್ಲ ದೈವೀ ಸಾಮರ್ಥ್ಯ, ಎಲ್ಲ ದೈವೀ ದಿವ್ಯಾನಂದ ಕೂಡಿಕೊಂಡಿರುವ ಶ್ರೀಮಾತೆಯವರಿಗೆ ಹೆಚ್ಚು ಹತ್ತಿರ ಕರೆದೊಯ್ಯುವಂತಾಗಲಿ.

*

# ಎರಡು ಹೊಸ ವರ್ಷದ ಪ್ರಾರ್ಥನೆಗಳು

## ಡಿಸೆಂಬರ 29, 1913

ಓ, ದೈವೀ ಪ್ರಭು, ವರ್ಷವನ್ನು ಕೊನೆಗೊಳಿಸುತ್ತಿರುವ ಈ ಸಾಮೂಹಿಕ ಸಂಪ್ರದಾಯ ನಮ್ಮ ಜೀವನದಲ್ಲಿ ಇನ್ನು ಮುಂದೆ ಯಾವ ಉದ್ದೇಶವನ್ನು ಹೊಂದಿರದಂತಹ ಎಲ್ಲ ಬಂಧನಗಳನ್ನು, ಆಸಕ್ತಿಗಳನ್ನು, ಭ್ರಮೆಗಳನ್ನು, ದೌರ್ಬಲ್ಯಗಳನ್ನು ಇಡಿಯಾಗಿ ಕೊನೆಗೊಳಿಸುವ ಒಂದು ಸಂದರ್ಭವಾಗಲಿ ಎಂದು ಅನುಗ್ರಹಿಸು. ಪ್ರತಿಯೊಂದು ಕ್ಷಣ ನಾವು ಧೂಳು ಕೆಳಗೆ ಬಿದ್ದು ಹೋಗುವಂತೆ ಮಾಡುವ ರೀತಿಯಲ್ಲಿ ಗತಕಾಲವನ್ನು ಅಲುಗಾಡಿಸಿ ದೂರ ಕಳಿಸಬೇಕು, ಅದರಿಂದಾಗಿ ಅದು ನಮ್ಮೆದುರಿಗೆ ಪ್ರತಿಯೊಂದು ಕ್ಷಣ ನಮ್ಮೆದುರಿಗೆ ತೆರೆದುಕೊಳ್ಳುವ ಪರಿಶುದ್ಧ ಮಾರ್ಗ ಕೊಳೆಗೊಳಗಾಗದಂತಾಗಲಿ.

ನಮ್ಮೊಳಗಿರುವ ಸರಿಯೆಂದು ಒಪ್ಪಿಕೊಂಡ ಹಾಗೂ ತಿದ್ದಿದ ನಮ್ಮ ಎಲ್ಲ ತಪ್ಪುಗಳು ಯಾವ ಪರಿಣಾಮವನ್ನೂ ತಂದುಕೊಡದ ಸಾಮರ್ಥ್ಯಹೀನ ವ್ಯರ್ಥ ಮೃಗಜಲಗಳಿಗಿಂತದ ಹೆಚ್ಚಿನವಾಗದಿರಲಿ ಹಾಗೂ ಇನ್ನು ಮುಂದೆ ಅಸ್ತಿತ್ವದಲ್ಲಿರಬಾರದ ಎಲ್ಲದರ ಮೇಲೆ, ಎಲ್ಲ ಮಬ್ಬುತನ, ಎಲ್ಲ ಅಜ್ಞಾನ, ಎಲ್ಲ ಅಹಂಕಾರ ಇವುಗಳ ಮೇಲೆ ನಮ್ಮ ಪಾದವನ್ನು ಸ್ಥಿರವಾಗಿ ಒತ್ತುತ್ತ ಹೆಚ್ಚು ವಿಸ್ತಾರವಾದ ಕ್ಷಿತಿಜಗಳತ್ತ, ಹೆಚ್ಚು ಗಾಢವಾದ ಪ್ರಕಾಶದತ್ತ, ಹೆಚ್ಚು ಪರಿಪೂರ್ಣವಾದ ಕರುಣೆಯತ್ತ, ಹೆಚ್ಚು ನಿರಾಸಕ್ತ ಪ್ರೇಮವೇ ಆದ ನಿನ್ನತ್ತ ದಿಟ್ಟತನದಿಂದ ನಾವು ನಮ್ಮ ಹಾರಾಟವನ್ನು ಕೈಗೆತ್ತಿಕೊಳ್ಳುವಂತಾಗಲಿ.

ನಮ್ಮ ಜೀವನದ ಪ್ರಭುವಾದ ಓ ದೈವೀ ಪ್ರಭು, ನಾನು ನಿನಗೆ ನಮಸ್ಕರಿಸುತ್ತೇನೆ, ಹಾಗೂ ನಿನ್ನ ಆಳಿಕೆಯನ್ನು ಪೃಥ್ವಿಯ ಮೇಲೆ ಎಲ್ಲೆಡೆಯಲ್ಲಿ ಸಾರಿ ಹೇಳಲು ಬಯಸುತ್ತೇನೆ.

**CWM, 1/42** **- ಶ್ರೀಮಾತೆ**

*



**ಸಾಮೂಹಿಕ ಅಭೀಪ್ಸೆಯ ಸಾಮರ್ಥ್ಯ**

ಸಾಮರಸ್ಯದಿಂದ ಕೂಡಿದ ಸಾಮೂಹಿಕ ಅಭೀಪ್ಸೆ ಪರಿಸ್ಥಿತಿಗಳ ಮುನ್ನಡೆ (course)ಯನ್ನು ಬದಲು ಮಾಡಬಲ್ಲದು

**Botanical Name: Hoyacarnosa**

*

**ಜನವರಿ 1, 1914**

ಎಲ್ಲ ವರಗಳನ್ನು ಪರಮೋಚ್ಚ ರೀತಿಯಲ್ಲಿ ವಿತರಣ ಮಾಡುವ ನಿನಗೆ, ಜೀವನವನ್ನು ಪರಿಶುದ್ಧ, ಸುಂದರ ಹಾಗೂ ಒಳ್ಳೆಯದನ್ನಾಗಿ ಮಾಡುವುದರ ಮೂಲಕ ಅದಕ್ಕೆ ಸಮರ್ಥನೆ ನೀಡುವ ನಿನಗೆ, ನಮ್ಮ ಅದೃಷ್ಟಗಳ ಹಾಗೂ ನಮ್ಮೆಲ್ಲ ಅಭೀಪ್ಸೆಗಳ ಪ್ರಭುವಾದ ನಿನಗೆ ಈ ಹೊಸ ವರ್ಷದ ಮೊದಲ ನಿಮಿಷವನ್ನು ಮುಡುಪಾಗಿರಿಸಲಾಗಿತ್ತು.

ಈ ಮುಡಿಪಾಗಿರಿಸಿಕೊಳ್ಳುವಿಕೆಯ ಮೂಲಕ ಅದು ಸಂಪೂರ್ಣವಾಗಿ ದಿವ್ಯತೆಗೇರುವಂತಾಗಲಿ, ನಿನಗಾಗಿ ಭರವಸೆ ತಾಳಿದವರು, ನಿನ್ನನ್ನು ಸರಿಯಾದ ಮಾರ್ಗದಲ್ಲಿ ಅರಸುವವರು; ನಿನ್ನನ್ನು ಅರಸುತ್ತ ನಿನ್ನನ್ನು ಕಂಡುಕೊಂಡವರು, ಉಪಾಯ ಎಲ್ಲಿದೆ ಎಂಬುದನ್ನು ತಿಳಿದುಕೊಳ್ಳದೆಯೆ ವೇದನೆ ಪಡುತ್ತಿರುವವರು ನಿನ್ನ ಜೀವನ ಅವರ ಮಬ್ಬಾದ ಪ್ರಜ್ಞೆಯ ಬಿರುಸಾದ ಗಟ್ಟಿಪದರನ್ನು ಭೇದಿಸು–ತ್ತಿರುವುದನ್ನು ಕ್ರಮೇಣ ಭಾವನೆಗೆ ತಂದುಕೊಳ್ಳುವಂತಾಗಲಿ.

ಒಳಿತು ಮಾಡುವ ನಿನ್ನ ಭವ್ಯತೆಯ ಎದುರು ಆಳವಾದ ಭಕ್ತಿಯಿಂದ ಹಾಗೂ ಮಿತಿರಹಿತ ಕೃತಜ್ಞತೆಯಿಂದ ಬಾಗಿ ನಮಸ್ಕರಿಸುತ್ತೇನೆ; ನಿನ್ನನ್ನು

ಪ್ರಕಟಗೊಳಿಸಿದಕ್ಕಾಗಿ ಪೃಥ್ವಿಯ ಹೆಸರಿನಲ್ಲಿ ನಾನು ನಿನಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ, ಇನ್ನೂ ಹೆಚ್ಚು ಪೂರ್ತಿಯಾಗಿ ನಿನ್ನನ್ನು ಪ್ರಕಟಿಸು ಎಂದು ಅದರ ಹೆಸರಿನಲ್ಲಿ ಮೊರೆಯಿಡುತ್ತೇನೆ, ಆ ಪ್ರಕಟಣೆ ದೈವೀ ಪ್ರಕಾಶ ಹಾಗೂ ದೈವೀ ಪ್ರೇಮ ಇವುಗಳ ತಡೆಗೊಳಗಾಗದ ಬೆಳವಣಿಗೆಯಲ್ಲಿರಲಿ.

ನಮ್ಮ ಯೋಚನೆಗಳ, ಭಾವನೆಗಳ ಹಾಗೂ ನಮ್ಮ ಕ್ರಿಯೆಗಳ ಸಾರ್ವಭೌಮ ದೈವೀ ಪ್ರಭುವಾಗು.

ನೀನು ನಮ್ಮ ನೈಜತೆಯಾಗಿರುವಿ, ಕೇವಲ ಏಕೈಕ ದೈವೀ ನೈಜತೆಯಾಗಿರುವಿ.

ನೀನಿಲ್ಲದೆ ಎಲ್ಲವೂ ಮಿಥ್ಯೆ ಹಾಗೂ ಭ್ರಮೆ, ಎಲ್ಲವೂ ಮಂಕುಬಡಿದ ಮಬ್ಬುತನ.

ನಿನ್ನಲ್ಲಿ ಜೀವನ, ಪ್ರಕಾಶ ಹಾಗೂ ಆನಂದಗಳಿವೆ
ನಿನ್ನಲ್ಲಿ ಪರಮೋಚ್ಚ ಶಾಂತಿಯಿದೆ

**CWM, 1/43** **- ಶ್ರೀಮಾತೆ**

*



**ಭಗವಂತನಿಂದ ಪ್ರೇಮ**

ಪ್ರೇಮದ ಒಂದು ಕಂಪನ, ಅದನ್ನು ಪರಮೋಚ್ಚನು ಒಂದು ನಿರ್ದಿಷ್ಟ (ವ್ಯಕ್ತಿ ಅಥವಾ ವಸ್ತು) ಬಿಂದುವಿನತ್ತ ನಿರ್ದೇಶಿಸುತ್ತಾನೆ.

**Botanical Name: Rosa**

*

## ಹೊಸ ವರ್ಷದ ಸಂದೇಶಗಳು

### 1933

ಹೊಸ ವರ್ಷದ ಜನ್ಮ ನಮ್ಮ ಪ್ರಜ್ಞೆಯ ಹೊಸ ಜನ್ಮವಾಗುವಂತಾಗಲಿ
ಗತಕಾಲವನ್ನು ಬಹಳ ದೂರ ಬಿಟ್ಟುಕೊಟ್ಟು ನಾವು ಪ್ರಕಾಶಮಯ
ಭವಿಷ್ಯತ್ತಿನತ್ತ ಓಡಿ ಹೋಗೋಣ.

### 1934

ದೈವೀ ಪ್ರಭು, ವರ್ಷ ಮೃತವಾಗುತ್ತಿದೆ ಹಾಗೂ ನಮ್ಮ ಕೃತಜ್ಞತೆ ನಿನ್ನ
ಮುಂದೆ ಬಾಗಿ ನಮಸ್ಕರಿಸುತ್ತದೆ.
ದೈವೀ ಪ್ರಭು, ವರ್ಷ ಮತ್ತೆ ಜನ್ಮ ತಾಳಿದೆ, ನಮ್ಮ ಪ್ರಾರ್ಥನೆ ನಿನ್ನತ್ತ
ಮೇಲಕ್ಕೇರಿ ಬರುತ್ತದೆ.
ಅದು ನಮಗೂ ಕೂಡ ಒಂದು ಹೊಸ ಜೀವನದ ಅರುಣೋದಯ
ವಾಗುವಂತಾಗಲಿ.

### 1935

ಈ ದಿನ ಸಾಯಂಕಾಲ ನಾವು ಕೃತ್ರಿಮ ಹಾಗೂ ಮಿಥ್ಯೆಯಾದದ್ದನ್ನೆಲ್ಲ ನಾಟಕ ಹಾಗೂ ಅನುಕರಣ ಮಾಡುವಂತಹದನ್ನೆಲ್ಲ ಶರಣಾಗತಿಯೊಂದಿಗೆ ಬಿಟ್ಟು ಕೊಡುತ್ತೇವೆ. ಕೊನೆಯ ಹಂತದಲ್ಲಿರುವ ವರ್ಷದೊಂದಿಗೆ ಅದು ಕೂಡ ಮಾಯವಾಗಿ ಬಿಡಲಿ. ಕೇವಲ ಯಾವುದು ಪರಿಪೂರ್ಣ ಸತ್ಯ, ನಿಷ್ಕಪಟ, ನೇರ ಹಾಗೂ ಪರಿಶುದ್ಧವಾಗಿದೆಯೋ ಅದು ಪ್ರಾರಂಭವಾಗುತ್ತಿರುವ ವರ್ಷದಲ್ಲಿ ಉಳಿದುಕೊಳ್ಳಲಿ.

**CWM, 15/165** **- ಶ್ರೀಮಾತೆ**

*

### 1936

ಓ ದೈವೀ ಪ್ರಭು, ಈ ವರ್ಷ ನಿನ್ನ ದೈವೀ ವಿಜಯದ ವರ್ಷವಾಗು–ವಂತಾಗಲೆಂದು ಅನುಗ್ರಹಿಸು. ನಾವು ಅದಕ್ಕೆ ಯೋಗ್ಯರಾಗುವಂತೆ ಮಾಡುವ ಒಂದು ಪರಿಪೂರ್ಣ ವಿಶ್ವಾಸಾರ್ಹತೆಗಾಗಿ ಅಭೀಪ್ಸೆಪಡುತ್ತೇವೆ.

## 1937

ಓ ದೈವೀ ಪ್ರಭು ನಿನಗೆ ಜಯವಾಗಲಿ, ಪ್ರತಿಯೊಂದು ಅಡೆತಡೆಯ ಮೇಲೆ ನೀನು ಜಯಸಾಧಿಸುವಿ!

ನಿನ್ನ ಕಾರ್ಯಕ್ಕೆ ನಮ್ಮಲ್ಲಿರುವ ಯಾವುದೂ ಕೂಡ ಒಂದು ಅಡಚಣೆ ಆಗದಂತೆ ಅನುಗ್ರಹಿಸು.

## 1938

ದೈವೀ ಪ್ರಭು, ನಿನ್ನನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕಾಗಿ ನಮ್ಮಲ್ಲಿರುವ ಎಲ್ಲವೂ ತಯಾರಾಗುವಂತೆ ಅನುಗ್ರಹಿಸು. ಪರಮೋಚ್ಚ ಸಿದ್ಧಿಸಿಕೊಳ್ಳುವವನಾದ ಓ ದೈವೀ ಪ್ರಭು, ಹೊಸ ವರ್ಷದ ಹೊಸ್ತಿಲದ ಮೇಲೆ ನಾವು ನಿನಗೆ ಬಾಗಿ ನಮಸ್ಕರಿಸುತ್ತೇವೆ.

## 1939

**ಪರಿಶುದ್ಧತೆಯ ವರ್ಷವಾಗಲಿದೆ**

ಓ ದೈವೀ ಪ್ರಭು, ದೈವೀ ಕಾರ್ಯದಲ್ಲಿ ಭಾಗವಹಿಸುವುವರೆಲ್ಲರೂ ಪರಮೋಚ್ಚ ಪರಿಶುದ್ಧತೆಯ ಮೂಲಕ ತಮ್ಮ ಅಹಂಕಾರದ ಪ್ರಾಬಲ್ಯದಿಂದ ಮುಕ್ತಿ ಪಡೆಯುವುದಕ್ಕಾಗಿ ನಿನ್ನಲ್ಲಿ ಮೊರೆಯಿಡಲಿ.

## 1940

**ನಿಶ್ಚಲ ನೀರವತೆಯ ಹಾಗೂ ನಿರೀಕ್ಷೆಯ ವರ್ಷ**

ಓ ದೈವೀ ಪ್ರಭು, ನಮ್ಮ ಇಡಿಯಾದ ಆಸರೆಯನ್ನು ನಿನ್ನ ದೈವೀಕೃಪೆಯಲ್ಲಿ ಮಾತ್ರ ಕಂಡುಕೊಳ್ಳುವಂತಾಗಲಿ.

**CWM, 15/166** **- ಶ್ರೀಮಾತೆ**

*

## 1941

**ಜಗತ್ತು ವಿರೋಧೀ ಹಾಗೂ ಅದೈವಿಕವಾದ ಶಕ್ತಿಗಳ ಬೆದರಿಕೆಗೆ ಒಳಗಾಗಿ ಅದರ ಆಧ್ಯಾತ್ಮಿಕ ಜೀವನಕ್ಕಾಗಿ ಹೋರಾಡುತ್ತಿದೆ**

ದೈವೀ ಪ್ರಭು, ನಾವು ನಿನ್ನ ವೀರ ಯೋಧರಾಗಲು ಅಭೀಪ್ಸೆಪಡುತ್ತೇವೆ, ಅದರಿಂದಾಗಿ ನಿನ್ನ ಮಹಿಮೆ ಜಗತ್ತಿನ ಮೇಲೆ ಪ್ರಕಟವಾಗುವಂತಾಗಲಿ.

## 1942

**ಎಲ್ಲ ಶತ್ರುಗಳ ಮೇಲೆ ಜಯಸಾಧಿಸುವ ಓ ದೈವೀಪ್ರಭು ನಿನಗೆ ಜಯವಾಗಲಿ!**

ತಾಳಿಕೊಳ್ಳಲು ಹಾಗೂ ನಿನ್ನ ವಿಜಯದಲ್ಲಿ ಪಾಲುಗಾರರಾಗಲು ನಮಗೆ ಸಾಮರ್ಥ್ಯವನ್ನು ನೀಡು.

## 1943

**ಮೂಲ ಸ್ವರೂಪದ ಹಾಗೂ ನಿರ್ಧಾರಕ ಆಯ್ಕೆಯೊಂದನ್ನು ಮಾಡಿಕೊಳ್ಳ–ಬೇಕಾದ ಆ ಗಳಿಗೆ ಒದಗಿ ಬಂದಿದೆ.**

**ದೈವೀ ಪ್ರಭು, ಮಿಥ್ಯೆಯನ್ನು ತಿರಸ್ಕರಿಸಲು ಹಾಗೂ ಪರಿಶುದ್ಧ ಮತ್ತು ನಿನ್ನ ವಿಜಯಕ್ಕೆ ಯೋಗ್ಯವಾದ ನಿನ್ನ ಸತ್ಯದಲ್ಲಿ ಹೊರಹೊಮ್ಮಲು ನಮಗೆ ಬಲ ನೀಡು.**

ಇದು ಸರ್ವಸಾಧಾರಣ ಸಿದ್ಧಾಂತದ ಪ್ರಶ್ನೆಯಲ್ಲ; ಅದು ವಿಷಯಗಳ ವಾಸ್ತವತೆಗೆ ಸೇರಿದೆ. ಅಸುರ ಮಿಥ್ಯೆಯ, ಅದೈವಿಕವಾದುದರ ಶಕ್ತಿ, ಅವನು ಭೌತಿಕ ಜಗತ್ತಿನ ಮೇಲೆ ಸಾರ್ವಭೌಮನ ಹಾಗೆ ಆಳಿಕೆ ನಡೆಸುತ್ತಿದ್ದಾನೆ, ಅವನ ಪ್ರಭಾವವಿರುವ ಭಾವನೆ ಎಲ್ಲೆಡೆ ಬರುತ್ತಿದೆ, ಅದು ಭೌತದ್ರವ್ಯದಲ್ಲಿರುವ ಎಲ್ಲದರಲ್ಲಿ ಇದೆ. ಆದರೆ ಈಗ ಪ್ರತ್ಯೇಕತೆ ಹಾಗೂ ಪರಿಶುದ್ಧತೆ ಇವುಗಳನ್ನು ಕೈಕೊಳ್ಳಬಹುದಾದ, ಮಿಥ್ಯೆ ಹಾಗೂ ಆಸುರೀ ಪ್ರಭಾವವನ್ನು ತಿರಸ್ಕರಿಸಬಹುದಾದ, ದೈವೀ ಸತ್ಯದಲ್ಲಿ ಪ್ರತ್ಯೇಕವಾಗಿ ಜೀವಿಸಬಹುದಾದ ಸಮಯ ಸನ್ನಿಹಿತವಾಗಿದೆ.

**CWM, 15/176** **- ಶ್ರೀಮಾತೆ**

## 1944

ಓ ದೈವೀ ಪ್ರಭು, ಜಗತ್ತು ಅದೇ ಬಗೆಯ ಹೆಡ್ಡತನಗಳಲ್ಲಿ ಹಿಂದೆ ಬಿದ್ದುಬಿಡುವುದನ್ನು ತಡೆಯಲು ನಿನ್ನಲ್ಲಿ ಮೊರೆಯಿಡುತ್ತದೆ.

ಗುರುತಿಸಲಾದ ತಪ್ಪುಗಳು ಎಂದಿಗೂ ಮತ್ತೆ ಹೊಸದಾಗಿ ಆಗದಿರುವಂತೆ ಅನುಗ್ರಹಿಸು.

ಕೊನೆಯದಾಗಿ ಜಗತ್ತಿನ ಕ್ರಿಯೆಗಳು ಅದರ ಸಾರಿ ಹೇಳಲಾದ ಆದರ್ಶಗಳ ನಿಖರವಾದ ಹಾಗೂ ನಿಷ್ಕಪಟ ಅಭಿವ್ಯಕ್ತಿಯಾಗುವಂತೆ ಅನುಗ್ರಹಿಸು.

## 1945

ಜನರು ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿಯೂ ಕೂಡ ನಿಜ ಹೇಳುವವರಾಗಬೇಕೆಂಬುದನ್ನು ತಿಳಿದುಕೊಂಡಾಗ ಪೃಥ್ವಿ ಉಳಿದುಕೊಳ್ಳುವ ಹಾಗೂ ಜೀವಂತವಿರುವ ಶಾಂತಿಯನ್ನು ಪಡೆಯುವುದು.

ಓ ದೈವೀ ಪ್ರಭು, ಈ ಪರಿಪೂರ್ಣ ಸತ್ಯಸ್ಥಿತಿಗಾಗಿ ನಾವು ಅಭೀಪ್ಸೆ ಪಡುತ್ತೇವೆ.

## 1946

ದೈವೀ ಪ್ರಭು, ನಿನ್ನ ದೈವೀ ಶಾಂತಿಯನ್ನು ನಾವು ಪಡೆಯಲಿರುವೆವು, ವ್ಯರ್ಥವಾಗಿ ಶಾಂತಿಯನ್ನು ಹೋಲುವಂತಹದನ್ನಲ್ಲ, ನಿನ್ನ ದೈವೀ ಸ್ವಾತಂತ್ರ್ಯವನ್ನು, ಸ್ವಾತಂತ್ರ್ಯವನ್ನು ಹೋಲುವಂತಹದನ್ನಲ್ಲ, ನಿನ್ನ ದೈವೀ ಏಕತೆಯನ್ನು, ಏಕತೆಯನ್ನು ಹೋಲುವಂತಹದನ್ನಲ್ಲ. ಏಕೆಂದರೆ ಕೇವಲ ನಿನ್ನ ದೈವೀ ಶಾಂತಿ, ನಿನ್ನ ದೈವೀ ಸ್ವಾತಂತ್ರ್ಯ ಹಾಗೂ ನಿನ್ನ ದೈವೀ ಏಕತೆ ಇವು ಇನ್ನೂ ಪೃಥ್ವಿಯ ಮೇಲೆ ಆಳಿಕೆ ನಡೆಸುತ್ತಿರುವ ಕುರುಡಾದ ಹಿಂಸೆ, ಕಪಟಾಚಾರ ಹಾಗೂ ಮಿಥ್ಯೆ ಇವುಗಳ ಮೇಲೆ ಜಯ ಸಾಧಿಸಬಲ್ಲವು.

ನಿನ್ನ ದೈವೀ ವಿಜಯಕ್ಕಾಗಿ ಅಷ್ಟೊಂದು ಶೌರ್ಯದಿಂದ ಹೋರಾಡಿದ್ದ ಹಾಗೂ ವೇದನೆಗೊಳಗಾಗಿದ್ದ ಜನರು ಜಗತ್ತಿನಲ್ಲಿ ಸಾಧಿಸಿದ ನಿಜವಾದ ಹಾಗೂ ಪ್ರಾಮಾಣಿಕವಾದ ಪರಿಣಾಮಗಳನ್ನು ನೋಡುವಂತಾಗಲಿ ಎಂದು ಅನುಗ್ರಹಿಸು.

**CWM, 15/168** **- ಶ್ರೀಮಾತೆ**

*

## 1947

ಪ್ರತಿಯೊಂದು ಕೆಟ್ಟದ್ದಾದುದರಿಂದ ಇನ್ನೂ ಹೆಚ್ಚು ಕೆಟ್ಟದ್ದಾಗುವತ್ತ ಸಾಗಿ ಹೋಗುತ್ತಿದೆ ಎಂದು ತೋರಿಬರುವ ಕ್ಷಣವಿದ್ದಾಗ ನಾವು ನಂಬಿಕೆಯಿರುವ ಪರಮೋಚ್ಚ ಕ್ರಿಯೆಯನ್ನು ಕೈಕೊಳ್ಳಬೇಕು ಮತ್ತು ದೈವೀಕೃಪೆ ಎಂದಿಗೂ ನಮಗೆ ವಿಫಲತೆಯನ್ನು ತಂದುಕೊಡುವುದಿಲ್ಲ ಎಂಬುದನ್ನು ತಿಳಿದುಕೊಂಡಿರಬೇಕು.

**CWM, 15/168–69** **- ಶ್ರೀಮಾತೆ**

*

ಅರುಣೋದಯಕ್ಕಿಂತ ಮೊದಲಿರುವ ಗಳಿಗೆಗಳು ಅತ್ಯಂತ ಹೆಚ್ಚಿನ ಅಂಧಕಾರದಿಂದ ಕೂಡಿರುತ್ತವೆ. ಸ್ವಾತಂತ್ರ್ಯ ದೊರಕುವುದಕ್ಕಿಂತ ಮೊದಲು ಬರುವ ಗುಲಾಮಗಿರಿ ಎಲ್ಲದಕ್ಕಿಂತಲೂ ಅತ್ಯಂತ ವೇದನಾಪೂರ್ಣವಾಗಿರುತ್ತದೆ.

ಆದರೆ ನಂಬಿಕೆಯಿಂದ ಸಂಪನ್ನವಾದ ಹೃದಯದಲ್ಲಿ ಶಾಶ್ವತ ಭರವಸೆಯ ಜ್ವಾಲೆ ಪ್ರಜ್ವಲಿಸುತ್ತದೆ, ಅದು ಎದೆಗುಂದಿಸುವಿಕೆಗೆ ಸ್ಥಾನ ಬಿಟ್ಟುಕೊಡುವುದಿಲ್ಲ.

**CWM, 15/177** **- ಶ್ರೀಮಾತೆ**

*

## 1948

ಮುಂದುವರಿಯುತ್ತಿರಿ, ಎಂದೆಂದಿಗೂ ಸತತ ಮುಂದುವರಿಯುತ್ತಿರಿ!
ಸುರಂಗ ಮಾರ್ಗದ ಕೊನೆಗೆ ಪ್ರಕಾಶವಿರುತ್ತದೆ...
ಹೋರಾಟದ ಕೊನೆಗೆ ಜಯವಿರುತ್ತದೆ!

## 1949

ದೈವೀ ಪ್ರಭು, ಹೊಸ ವರ್ಷದ ಮುನ್ನಾದಿನದಂದು ನಾನು ಏನನ್ನು ಹೇಳಲೇಬೇಕಾಗಿದೆ ಎಂದು ನಿನ್ನನ್ನು ಕೇಳಿದೆ.

ನಾನು ಎರಡು ಕಟ್ಟಕಡೆಯ ಸಾಧ್ಯತೆಗಳನ್ನು ನೋಡುವಂತೆ ನೀನು ಮಾಡಿರುವಿ ಮತ್ತು ಅವುಗಳನ್ನು ಕುರಿತು ಮೌನದಿಂದ ಇರುವಂತೆ ಆಜ್ಞೆ ನೀಡಿರುವಿ.

## 1950

ಮಾತನಾಡುವುದು ಬೇಡ, ಕ್ರಿಯೆ ಕೈಕೊಳ್ಳಬೇಕು
ಘೋಷಿಸುವುದು ಬೇಡ, ಸಿದ್ಧಿಸಿಕೊಳ್ಳಬೇಕು.

*

## 1951

ದೈವೀ ಪ್ರಭು, ನಾವು ಪೃಥ್ವಿಯ ಮೇಲೆ ನಿನ್ನ ಪರಿವರ್ತನೆಯ ಕಾರ್ಯವನ್ನು ಪೂರ್ಣಗೊಳಿಸಲು ಇದ್ದೇವೆ. ಅದು ನಮ್ಮ ಏಕಮಾತ್ರ ಸಂಕಲ್ಪ, ನಮ್ಮ ಏಕಮಾತ್ರ ಪೂರ್ವಮಗ್ನತೆ. ಅದು ನಮ್ಮ ಏಕಮಾತ್ರ ಉದ್ಯೋಗವಾಗಲಿ ಹಾಗೂ ನಮ್ಮ

ಎಲ್ಲ ಕ್ರಿಯೆಗಳು ಈ ಒಂದು ಏಕೈಕ ಗುರಿಯತ್ತ ನಮಗೆ ಸಹಾಯಕವಾಗುವಂತೆ ಆಗಲಿ ಎಂದು ಅನುಗ್ರಹಿಸು.

**CWM, 15/169–70** **- ಶ್ರೀಮಾತೆ**

*

## 1952

ಓ ದೈವೀ ಪ್ರಭು, ನಮ್ಮ ನಂಬಿಕೆಯ ಗುಣಲಕ್ಷಣವನ್ನು ಪರೀಕ್ಷೆಗೊಳಪಡಿಸಲು ಹಾಗೂ ನಮ್ಮ ನಿಷ್ಕಾಪಟ್ಯ ನಿನ್ನ ಒರೆಗಲ್ಲ ಮೇಲೆ ಹಾಯ್ದುಹೋಗುವಂತೆ ಮಾಡಲು ನಿರ್ಧರಿಸಿರುವಿ. ನಾವು ಆ ಪರೀಕ್ಷೆಯಿಂದ ಹೆಚ್ಚು ಶ್ರೇಷ್ಠರಾಗಿ ಹಾಗೂ ಹೆಚ್ಚು ಪರಿಶುದ್ಧರಾಗಿ ಬರುವಂತೆ ಅನುಗ್ರಹಿಸು.

## 1953

ದೈವೀ ಪ್ರಭು, ನೀನು ನಮಗೆ ಹಿಂದೆಗೆಯುವುದು ಬೇಡ, ಗಟ್ಟಿಯಾಗಿ ಹಿಡಿದುಕೊಳ್ಳಿರಿ ಎಂದು ಹೇಳಿರುವಿ. ಪ್ರತಿಯೊಂದೂ ಕಳೆದು ಹೋಗಿದೆ ಎಂದು ತೋರಿಬಂದಾಗ ಎಲ್ಲವನ್ನೂ ರಕ್ಷಿಸಲಾಗುತ್ತದೆ.

## 1954

ನನ್ನ ದೈವೀ ಪ್ರಭು, ಈ ವರ್ಷಕ್ಕಾಗಿ ಎಲ್ಲರಿಗೂ ನಿನ್ನ ಉಪದೇಶ ಇಲ್ಲಿದೆ:

"ಯಾವುದನ್ನೂ ಕುರಿತು ಎಂದಿಗೂ ಜಂಬಕೊಚ್ಚಿಕೊಳ್ಳುವುದು ಬೇಡ, ನಿಮ್ಮ ಕ್ರಿಯೆಗಳು ನಿಮಗಾಗಿ ಮಾತನಾಡಲಿ."

**CWM, 15/170** **- ಶ್ರೀಮಾತೆ**

*

## 1955

ಭಗವಂತನ ಸಂಕಲ್ಪದ ವಿರುದ್ಧ ಯಾವ ಮಾನವ ಸಂಕಲ್ಪವೂ ಜಯಶಾಲಿ–ಯಾಗಲಾರದು. ನಾವು ಉದ್ದೇಶಪೂರ್ವಕವಾಗಿ ನಮ್ಮನ್ನು ಪ್ರತ್ಯೇಕವಾಗಿ ಭಗವಂತನ ಬದಿಯಲ್ಲಿ ಇರಿಸೋಣ ಮತ್ತು ಜಯ ನಿರ್ಣಾಯಕವಾಗಿ ನಿಶ್ಚಿತವಾಗಿರುತ್ತದೆ.

*

## 1957

ಅನಿಷ್ಟದ ಸಾಮರ್ಥ್ಯಕ್ಕಿಂತ ಹೆಚ್ಚು ಶ್ರೇಷ್ಠವಾದ ದೈವೀ ಸಾಮರ್ಥ್ಯ ಮಾತ್ರ ವಿಜಯವನ್ನು ಗೆದ್ದುಕೊಳ್ಳಬಲ್ಲದು. ಶಿಲುಬೆಗೇರಿಸಿದ ದೇಹವಲ್ಲ, ಆದರೆ ತೇಜೋಮಯಗೊಳಿಸಿದ ದೇಹ ಜಗತ್ತನ್ನು ರಕ್ಷಿಸಬಲ್ಲದು.

*

## 1958

ಓ ಪ್ರಕೃತಿಯೆ, ಭೌತಿಕ ಮಾತೆಯೆ, ನೀನು ಸಹಯೋಗ ನೀಡಲಿರುವಿ ಎಂದು ಹೇಳಿರುವಿ ಮತ್ತು ಈ ಸಹಯೋಗದ ಭವ್ಯತೆಗೆ ಮಿತಿ ಎಂಬುದಿಲ್ಲ.

*

## 1960

ತಿಳಿದುಕೊಳ್ಳುವುದು ಒಳ್ಳೆಯದು,
ಜೀವಿಸುವುದು ಹೆಚ್ಚು ಒಳ್ಳೆಯದು,
ಆಗಿರುವುದು, ಅದು ಪರಿಪೂರ್ಣವಾಗಿರುತ್ತದೆ.

*

## 1962

ಪರಿಪೂರ್ಣತೆಗಾಗಿ ನಾವು ದಾಹಪಡುತ್ತೇವೆ. ಈ ಮಾನವ ಪರಿಪೂರ್ಣತೆಗಾಗಿ ಅಲ್ಲ, ಅದು ಅಹಂಕಾರದ ಪರಿಪೂರ್ಣತೆಯಾಗಿರುತ್ತದೆ ಮತ್ತು ದೈವೀ ಪರಿಪೂರ್ಣತೆಯ ಮಾರ್ಗದಲ್ಲಿ ಅಡ್ಡ ಬರುತ್ತದೆ.

ಆದರೆ ಆ ಒಂದು ಪರಿಪೂರ್ಣತೆ ಪೃಥ್ವಿಯ ಮೇಲೆ ಸನಾತನ ದೈವೀ ಸತ್ಯವನ್ನು ಪ್ರಕಟಿಸುವ ಸಾಮರ್ಥ್ಯ ಹೊಂದಿದೆ.

**CWM, 15/173–74** **- ಶ್ರೀಮಾತೆ**

*

## 1963

ದೇವ ಮುಹೂರ್ತಕ್ಕಾಗಿ ತಯಾರು ಮಾಡಿಕೊಳ್ಳೋಣ.

## 1964

ನೀವು ತಯಾರಾಗಿದ್ದೀರಾ?

**CWM, 15/174** **- ಶ್ರೀಮಾತೆ**

*

## 1966

ದೈವೀಸತ್ಯಕ್ಕೆ ಸೇವೆ ಸಲ್ಲಿಸೋಣ
ದೈವೀ ಸತ್ಯವೆಂದರೇನು?

ದೈವೀಸತ್ಯಕ್ಕೆ ನಿಷ್ಕಪಟನಾಗಿ ಸೇವೆ ಸಲ್ಲಿಸಲು ಬಯಸುವವನು ದೈವೀ ಸತ್ಯವನ್ನು ತಿಳಿದುಕೊಳ್ಳುವನು.

**CWM, 15/179** **- ಶ್ರೀಮಾತೆ**

*

## 1968

ತರುಣರಾಗಿ ಉಳಿದುಕೊಳ್ಳಿರಿ, ಪರಿಪೂರ್ಣತೆಯತ್ತ ಹೋರಾಡುವುದನ್ನು ಎಂದಿಗೂ ನಿಲ್ಲಿಸುವುದು ಬೇಡ.

**CWM, 15/175** **- ಶ್ರೀಮಾತೆ**

*

## 1971

ಭವಿಷ್ಯತ್ತಿನತ್ತ ನೆಗೆತ ಮಾಡುವವರು ದೈವಾನುಗ್ರಹಕ್ಕೆ ಪಾತ್ರರಾದವ–ರಾಗಿರುತ್ತಾರೆ.

**CWM, 15/175** **- ಶ್ರೀಮಾತೆ**

*

## 1972

ಶ್ರೀ ಅರವಿಂದರ ಜನ್ಮಶತಮಾನೋತ್ಸವಕ್ಕೆ ಯೋಗ್ಯರಾಗುವುದಕ್ಕಾಗಿ ನಾವೆಲ್ಲ ಪ್ರಯತ್ನಿಸೋಣ.

**CWM, 15/176** **- ಶ್ರೀಮಾತೆ**

*



ಕೆಂಪುಕಮಲ ಶ್ರೀ ಅರವಿಂದರ ಹೂವು, ಆದರೆ ವಿಶೇಷವಾಗಿ ಅವರ ಜನ್ಮಶತಮಾನೋತ್ಸವಕ್ಕೆ ಅವರ ಪ್ರಭಾಮಂಡಲದ ಬಣ್ಣವಾದ ನೀಲಿಬಣ್ಣದ ಕಮಲವನ್ನು ಆಯ್ದುಕೊಳ್ಳುವವರಿದ್ದೇವೆ, ಅದನ್ನು ಪೃಥ್ವಿಯ ಮೇಲೆ ಪರಮೋಚ್ಚನ ಪ್ರಕಟಣೆಯ ಜನ್ಮಶತಮಾನೋತ್ಸವದ ಸಂಕೇತವಾಗಿಸುವುದನ್ನಾಗಿ ಮಾಡಬೇಕಾಗಿದೆ.

**Botanical Significana:** Nymphaea careulea known primarily as blue lotus (or blue Egyptian lotus), but also blue water lily (or blue Egyptian water lily), and sacred blue lily, is a water lily in genus Nymphaea. Like other species in the genus, the plant contains the psycho active alkaloid aporphine (not to be confused with apomorphine). It was known to the Ancient Egyption civilizations.

*

# ಹೊಸ ವರ್ಷಕ್ಕಾಗಿ ನೀಡಿದ ಸಂದೇಶಗಳಲ್ಲಿ ಕೆಲವೊಂದನ್ನು ಕುರಿತು ಟಿಪ್ಪಣಿಗಳು

## ದಿವ್ಯಾನಂದದ ಅದ್ಭುತ ಜಗತ್ತು (1961)

**ಈ ದಿವ್ಯಾನಂದದ ಅದ್ಭುತ ಜಗತ್ತು ಪೃಥ್ವಿಯ ಮೇಲೆ ಕೆಳಗಿಳಿದು ಬರುವುದಕ್ಕಾಗಿ ನಮ್ಮ ಕರೆಗಾಗಿ, ನಮ್ಮ ದ್ವಾರಗಳ ಬಳಿ ಕಾದುಕೊಂಡಿದೆ.**

**ಪ್ರಶ್ನೆ:** *ಈ "ದಿವ್ಯಾನಂದದ ಅದ್ಭುತವಾದ ಜಗತ್ತು" ಫೆಬ್ರವರಿ 21, 1956 ರಂದು ಜನ್ಮ ತಾಳಿದ ಅತಿಮಾನಸದ ಜಗತ್ತೇ ಆಗಿದೆಯೆ ಇಲ್ಲವೆ ಅದು ಭಿನ್ನವಾಗಿದೆಯೆ? ನೀವು ಅದನ್ನು ಕುರಿತು ದಿವ್ಯಾನಂದದ ಜಗತ್ತು ಎಂದು ಹೇಳಿರುವುದರಿಂದ ಅದು ಕೇವಲ  ಈಗಾಗಲೆ ಜನ್ಮತಾಳಿದ ಅತಿಮಾನಸ ಜಗತ್ತಿನದಾಗಿರಲಿಕ್ಕಿಲ್ಲ. ಅದರರ್ಥ ಅತಿಮಾನಸ ಜಗತ್ತಿನ ಪ್ರಕಟಣೆಯ ನಂತರ ಈಗ ಹೆಚ್ಚಿನ ಇನ್ನೊಂದು ಹೊಸ ಜಗತ್ತು ಪೃಥ್ವಿಯ ಮೇಲೆ ಪ್ರಕಟವಾಗಲು, ನಮ್ಮ ದ್ವಾರಗಳ ಬಳಿ ಕಾದುಕೊಂಡಿದೆ ಎಂದಾಗುವುದೆ?*

**ಶ್ರೀಮಾತೆ:** ಅದು ಸೃಷ್ಟಿಯ ಪ್ರಾರಂಭದಿಂದ ಯಾವಾಗಲೂ ಕಾದುಕೊಂಡಿದೆ.

**ಪ್ರಶ್ನೆ:** *ಆನಂದದ ಈ ಜಗತ್ತು ಅಸ್ತಿತ್ವದ ಸ್ತರಗಳ ಶ್ರೇಣಿ ವ್ಯವಸ್ಥೆಯ ಮುನ್ನಡೆಯ ಹಂತಗಳಲ್ಲಿ ಅತಿಮಾನಸ ಜಗತ್ತಿನ ಮೇಲೆ ಇರುವ ಸ್ಥಳದಲ್ಲಿಯೆ? ಹಾಗಿದ್ದರೆ ಅತಿಮಾನಸ ಜಗತ್ತು ಜನ್ಮ ತಾಳಿ ಆರು ವರ್ಷಗಳಾದ ನಂತರ ಇನ್ನೂ ಉಚ್ಚತರ ಜಗತ್ತು ಪ್ರಕಟವಾಗುವಂತೆ ಮಾಡುವುದಕ್ಕೆ ಅದು ಸಾಕಷ್ಟು ಒಳ್ಳೆಯ ರೀತಿಯಲ್ಲಿ ಪೃಥ್ವಿಯ ಮೇಲೆ ಸ್ಥಾಪಿತಗೊಂಡಿದೆ ಎಂಬ ಅರ್ಥ ಕೊಡುವುದಿಲ್ಲವೆ?*

**ಶ್ರೀಮಾತೆ:** ಅವಶ್ಯವಾಗಿ ಇಲ್ಲ.

**ಪ್ರಶ್ನೆ:** *ಮೇಲೆ ಹೇಳಿದ ಪ್ರಶ್ನೆ ಮೇಲಕ್ಕೆದ್ದು ಬರುತ್ತದೆ, ಏಕೆಂದರೆ ಶ್ರೀ ಅರವಿಂದರ ಪ್ರಕಾರ ಪ್ರಥ್ವಿಯ ಉತ್ಕ್ರಾಂತಿಯಲ್ಲಿ ಅತಿಮಾನಸ ಸರಿಯಾಗಿ ಸ್ಥಾಪಿತಗೊಳ್ಳುವವರೆಗೆ ಆನಂದದ ಸ್ತರ ಪ್ರಕಟಗೊಳ್ಳಲಾರದು.*

**ಶ್ರೀಮಾತೆ:** ಇದು ಪರಿಪೂರ್ಣವಾಗಿ ಸ್ಪಷ್ಟವಾಗಿದೆ.

**ಪ್ರಶ್ನೆ:** *"ನಮ್ಮ ದ್ವಾರಗಳ ಬಳಿ ಕಾದುಕೊಂಡಿರುವುದು" ಎಂಬುದರ ಅರ್ಥವೇನು?*

*ಅದು ಸೂಕ್ಷ್ಮ ಭೌತಿಕ ಸ್ತರದ ವರೆಗೆ ಕೆಳಗಿಳಿದು ಬಂದಿದೆ ಎಂಬ ಅರ್ಥ ಕೊಡುವುದೆ!*

**ಶ್ರೀಮಾತೆ:** ಆ ದ್ವಾರಗಳು ಏನೆಂಬುದನ್ನು ನಾನು ವಿಶಿಷ್ಟ ರೀತಿಯಲ್ಲಿ ಹೇಳಿಲ್ಲ.

**ಪ್ರಶ್ನೆ:** *ಪೃಥ್ವಿಯ ಮೇಲೆ ಬರುವುದಕ್ಕೆ ನಮ್ಮ ಕರೆಗಾಗಿ ನಮ್ಮ ದ್ವಾರಗಳ ಬಳಿ ಕಾದುಕೊಂಡಿದೆ" ಇದರರ್ಥ ಅದಕ್ಕೆ ಕರೆಕೊಡುವವರೆಗೆ ಅದು ಪೃಥ್ವಿಯ ಮೇಲೆ ಬರುವುದಿಲ್ಲ ಎಂದಾಗುವುದೆ?*

**ಶ್ರೀಮಾತೆ:** ನಿಶ್ಚಿತವಾಗಿ ಅಲ್ಲ.

**ಪ್ರಶ್ನೆ:** *ದಿವ್ಯಾನಂದದ ಈ ಜಗತ್ತನ್ನು ಕೆಳಗೆ ಕರೆತರುವುದಕ್ಕೆ ಅತ್ಯಂತ ಒಳ್ಳೆಯ ರೀತಿ ಯಾವುದು?*

**ಶ್ರೀಮಾತೆ:** ತಿಳಿದುಕೊಳ್ಳಬೇಕು ಹಾಗೂ ನಿಷ್ಕಪಟರಾಗಿರಬೇಕು.

**ಪ್ರಶ್ನೆ:** *ಜನವರಿ 21, 1961 ರಂದು ನೀವು ನಿಮ್ಮ ಐದು ಮುದ್ರಿತ ಛಾಯಾಚಿತ್ರಗಳನ್ನು ವಿತರಿಸಿದಿರಿ, ಅವುಗಳಲ್ಲಿ ಪ್ರತಿಯೊಂದಕ್ಕೆ ಅದರ ಪ್ರಾಮುಖ್ಯತೆಯನ್ನು ಸೂಚಿಸಲಾಗಿತ್ತು, ಅವು ನಮ್ಮಲ್ಲಿವೆ. ದಿವ್ಯಾನಂದದ ಜಗತ್ತನ್ನು ಕರೆತರುವುದಕ್ಕೆ ಅವುಗಳದೇನಾದರೂ ಪ್ರಯೋಜನವಿದೆಯೆ? ಕರೆಕೊಡುವುದಕ್ಕೆ ಸಹಾಯಕ ಎಂದು ಅವುಗಳನ್ನು ಕೊಟ್ಟಿದ್ದಾದರೆ, ಆ ಉದ್ದೇಶಕ್ಕೆ ಅತ್ಯಂತ ಒಳ್ಳೆಯ ರೀತಿಯಲ್ಲಿ ಅವುಗಳನ್ನು ಹೇಗೆ ಉಪಯೋಗಿಸಬೇಕು!*

**ಶ್ರೀಮಾತೆ:** ಪ್ರತಿಯೊಬ್ಬನೂ ತನಗಾಗಿ ಅದನ್ನು ತಾನೇ ಕಂಡುಕೊಳ್ಳಬೇಕು.

**ಪ್ರಶ್ನೆ:** ನಿಮ್ಮ *ಸಂದೇಶವನ್ನೇ ಒಂದು ಆವಾಹನೆ ಎಂದು ಪರಿವರ್ತಿಸಿದರೆ ಹಾಗೂ ಅದನ್ನು ನಿಶ್ಚಲ ನೀರವತೆಯಲ್ಲಿ ಏಕಾಗ್ರಗೊಂಡು ಕೆಳಗೆ ಹೇಳಿದ ರೀತಿಯಲ್ಲಿ ಪುನರುಚ್ಚರಿಸುತ್ತಿದ್ದರೆ ಈ ಆನಂದದ ಜಗತ್ತನ್ನು ಕೆಳಗೆ ಇಳಿದು ಬರುವಂತೆ ಕರೆಕೊಡುವುದಕ್ಕೆ ಸಹಾಯಕವಾಗುವುದೆ? "ನಮ್ಮ ದ್ವಾರಗಳ ಬಳಿ ನಮ್ಮ ಕರೆಗಾಗಿ ಕಾದುಕೊಂಡಿರುವ ಓ ಆನಂದದ ಅದ್ಭುತವಾದ ಜಗತ್ತೇ ಪೃಥ್ವಿಯ ಮೇಲೆ ಕೆಳಗಿಳಿದು ಬಾ".*

**ಶ್ರೀಮಾತೆ:** ಸ್ವಯಂಪ್ರೇರಣೆಯಿಂದ ಅದನ್ನು ಕೈಕೊಳ್ಳಲು ಇಷ್ಟಪಡುವವರಿಗೆ ಅದು ಸಹಾಯಕವಾಗುವುದು.

ಹೇಳದೆ ಇರಲಾಗಿರದ ಏನೋ ಒಂದು– ಹಲವಾರು ವಿಷಯಗಳು– ಯಾವಾಗಲೂ ಅಲ್ಲಿರುತ್ತವೆ.

**CWM, 15/177-79** **- ಶ್ರೀಮಾತೆ**

*

**ಭವಿಷ್ಯತ್ತಿಗಾಗಿ ಕಾರ್ಯಕೈಕೊಳ್ಳುವುದು (1970)**

**ಜಗತ್ತು ಬಹಳ ದೊಡ್ಡ ಬದಲಾವಣೆಗಾಗಿ ತಯಾರಿ ಮಾಡಿಕೊಳ್ಳುತ್ತಿದೆ. ನೀವದಕ್ಕೆ ಸಹಾಯ ಮಾಡುವಿರಾ**?

**ಪ್ರಶ್ನೆ**: *ನಿಮ್ಮ ಸಂದೇಶದಲ್ಲಿ ನೀವು ಹೇಳುತ್ತಿರುವ ದೊಡ್ಡ ಬದಲಾವಣೆಗೆ ನಾವು ಹೇಗೆ ಸಹಾಯ ಮಾಡಬೇಕು?*

**ಶ್ರೀಮಾತೆ:** ಸಹಾಯ ಸಲ್ಲಿಸುವುದಕ್ಕೆ ಅತ್ಯಂತ ಒಳ್ಳೆಯ ರೀತಿ ಎಂದರೆ ಪೃಥ್ವಿಯ ಮೇಲೆ ಕೆಳಗಿಳಿದು ಬಂದ ದೈವೀ ಪ್ರಜ್ಞೆ ನಿಮ್ಮಲ್ಲಿ ಕಾರ್ಯಮಾಡಲು ಅದಕ್ಕೆ ಅನುವು ಮಾಡಿಕೊಡಬೇಕು.

*

**ಪ್ರಶ್ನೆ:** *"ಭವಿಷ್ಯತ್ತಿಗಾಗಿ ಕಾರ್ಯ ಕೈಕೊಳ್ಳುವುದು" ಎಂದರೆ ಏನು?*

**ಶ್ರೀಮಾತೆ:** ಪ್ರಾರಂಭದ ದೆಸೆಯಲ್ಲಿ ವೈಯುಕ್ತಿಕ ಹಾಗೂ ರಾಷ್ಟ್ರೀಯ ಹಳೆಯ ರೂಢಿಗಳಿಗೆ ಅಂಟಿಕೊಳ್ಳುವುದನ್ನು ಬಿಟ್ಟುಕೊಡಬೇಕು.

*

ಈ ವರ್ಷ ನಿಜವಾದ ಕರುಣೆಯಿಂದ ಬರುವ, ಸಂತೋಷದಲ್ಲಿರುವ ಪ್ರಕಾಶಮಯ ಶಾಂತಿಯಿರುವ ವರ್ಷವಾಗಲಿ– ಅ ಕರುಣೆ ದೈವೀ ಕರುಣೆಯ ಮಾನವ ಮಗುವಾಗಿರುತ್ತದೆ.

ಈ ವರ್ಷ ನಮ್ಮನ್ನು ಮತ್ತೊಮ್ಮೆ ಒಟ್ಟಿಗೆ ತರದೆ ದಾಟಿಹೋಗುವ ವರ್ಷವಾಗದಿರಲಿ ಎಂಬ ಭರವಸೆ ಹೊಂದೋಣ.

**CWM, 15/181-82** **- ಶ್ರೀಮಾತೆ**

*

ಹೊಸ ವರ್ಷದ ಅರುಣೋದಯ ನಮಗೆ ಹೊಸ ಹಾಗೂ ಒಳ್ಳೆಯ ಜೀವನದ ಅರುಣೋದಯ ಕೂಡ ಆಗಲಿ.

**CWM, 15/182** **- ಶ್ರೀಮಾತೆ**

*

**ಅತಿಮಾನಸದ ಪ್ರಕಟಣೆಯ ಆಗಮನ ಕುರಿತು ಘೋಷಣೆ (1956)**

**1956ರ ಹೊಸ ವರ್ಷದ ಸಂದೇಶ: "ಅತಿ ಶ್ರೇಷ್ಠ ವಿಜಯಗಳು ಅತಿ ಕಡಿಮೆ ಸದ್ದು ಗದ್ದಲದಿಂದಿರುತ್ತವೆ. ಹೊಸ ಜಗತ್ತಿನ ಪ್ರಕಟಣೆಯನ್ನು ಡೋಲು ಬಾರಿಸುವುದರ ಮೂಲಕ ಸಾರಿ ಹೇಳಲಾಗುವುದಿಲ್ಲ."**

**ಪ್ರಶ್ನೆ:** *ಶ್ರೀಮಾತೆಯವರೆ, ನೀವು ಈ ವರ್ಷ ನೀಡಿದ ಸಂದೇಶ ಕುರಿತು ಸ್ವಲ್ಪ ವಿವರಣೆ ನೀಡುವಿರಾ?*

**ಶ್ರೀಮಾತೆ:** ಇದರ ಅರ್ಥ ಬಹುಶಃ ಬಹಳ ಸರಳವಾಗಿದೆ: ಅವುಗಳ ಬಗ್ಗೆ ಮಾತನಾಡದೆ ಅವು ಸಂಭವಿಸಲೆಂದು ಬಿಟ್ಟುಕೊಡುವುದು ಹೆಚ್ಚು ಒಳ್ಳೆಯದು. ನೀವು ನನ್ನನ್ನು ಕೇಳಿದಿರಾದರೆ ಅದರ ಅರ್ಥ ಹೀಗಿದೆ: ಆಗಬೇಕಾದುದು ಸಂಭವಿಸುವುದಕ್ಕಿಂತ ಮೊದಲು ಏನು ಸಂಭವಿಸಲಿದೆ ಎಂಬುದನ್ನು ಕುರಿತು ಏನೂ ಹೇಳದಿರುವುದು ಬಹಳ ಒಳ್ಳೆಯದು, ಹಾಗಿರದಿದ್ದರೆ ಅದು ನಾನು ಕರೆಯುವ "ಡೋಲು ಬಾರಿಸುವ ಶಬ್ದ" ಎಂದಾಗುತ್ತದೆ, ಅದನ್ನು ಪ್ರಚಾರ ಎಂದು ಕರೆಯಬಹುದು.

"ಅದು ಯಾವುದರ ಹಾಗಿರುತ್ತದೆ" ಎಂದು ಪ್ರಶ್ನೆ ಕೇಳುವವರ ರೀತಿಯದಾಗಿದೆ. ಕಾದು ನೋಡಿರಿ. ನಮಗೆ ಕನಿಷ್ಠ ಪಕ್ಷ ಒಂದು ಆಶ್ಚರ್ಯಕರ ಸಂಗತಿ ದೊರೆಯಬಹುದು... ಮತ್ತು "ನಾನು ಅದರ ಬಗ್ಗೆ ಏನೂ ತಿಳಿದಿಲ್ಲ" ಎಂಬ ಉತ್ತರ ನೀಡುತ್ತೇನೆ. ಏಕೆಂದರೆ ಕೂಡಲೆ ನಾನು ಅದಿದ್ದ ಹಾಗಿರುವ ಜಗತ್ತಿನ ಪ್ರಜ್ಞೆಯಲ್ಲಿ ನನ್ನನ್ನಿರಿಸುತ್ತೇನೆ, ಅದಕ್ಕೆ ಅಸಾಧಾರಣ ಸಂಗತಿಗಳು ಸಂಭವಿಸಲಿವೆ ಎಂದು ಸಾರಿ ಹೇಳಲಾಗಿದೆ, ಅವು ಏನು ಎಂದು ಕಲ್ಪನೆ ಮಾಡಿಕೊಳ್ಳುವುದಕ್ಕೆ ಅದು ಅಸಮರ್ಥವಾಗಿದೆ– ಏಕೆಂದರೆ ಒಮ್ಮೆ ನಾನು ನಿಮಗೆ ಹೇಳಿದ್ದೆ: ಮನುಷ್ಯ ಅವುಗಳನ್ನು ಕುರಿತು ಕಲ್ಪನೆ ಮಾಡಿಕೊಳ್ಳತೊಡಗಿದ ಕೂಡಲೆ ಅದರರ್ಥ ಅವು ಆಗಲೇ ಅಲ್ಲಿವೆ ಎಂದಾಗುತ್ತದೆ. ನೀವು ಏನನ್ನಾದರೂ ಕುರಿತು

ಕಲ್ಪನೆ ಮಾಡಿಕೊಳ್ಳುವುದಕ್ಕೆ ಅದು ಅಸ್ತಿತ್ವದಲ್ಲಿರಬೇಕು, ಹಾಗಿರದಿದ್ದರೆ ನೀವು ಅದನ್ನು ಕಲ್ಪನೆ ಮಾಡಿಕೊಳ್ಳಲಾರಿರಿ.

ಹೌದು; ನಮ್ಮ ಉಚ್ಚತರ ಸತ್ತೆಯಲ್ಲಿ ಅದೇನಿದೆ ಎಂಬುದರ ಬಗ್ಗೆ ನಾನು ಬಹಳ ಸ್ಪಷ್ಟ, ಬಹಳ ನಿಖರ, ಬಹಳ ಪ್ರಕಾಶಮಯ ಗ್ರಹಿಕೆ ಹೊಂದಬಹುದು. ಆದರೆ ಮನುಷ್ಯ ಭೌತಿಕ ಪ್ರಜ್ಞೆಯಲ್ಲಿ ಕೆಳಗಿಳಿದು ಬಂದಾಗ ಅವನು 'ಸರಿ ಅದರ ಬಗ್ಗೆ ನನಗೇನೂ ತಿಳಿದಿಲ್ಲ' ಎಂದು ಹೇಳಬೇಕು. ಅದು ಅಲ್ಲಿದ್ದಾಗ ಅದು ಹೇಗಿದೆ ಎಂಬುದರ ಬಗ್ಗೆ ನಾನು ಹೇಳುವೆ– ಮತ್ತು ಬಹುಶಃ ನಾನು ಹೇಳುವ ಆವಶ್ಯಕತೆ ಕೂಡ ಇರುವುದಿಲ್ಲ. ನೀವು ಅದನ್ನು ನೋಡಲು ಶಕ್ತರಾಗುವಿರಿ. ಅದನ್ನು ನೋಡಲು ಶಕ್ತರಾಗುವವರ ಮಧ್ಯದಲ್ಲಿ ನೀವಿರುತ್ತೀರಿ ಎಂದು ಆಶಿಸುತ್ತೇನೆ. ಏಕೆಂದರೆ ಕೆಲವರಿದ್ದಾರೆ ಅವರಿಗೆ ಅದನ್ನು ನೋಡಲು ಸಾಧ್ಯವಾಗುವುದಿಲ್ಲ.

ಮತ್ತು ಹಾಗಾಗಿ ಅದರಿಂದಾಗುವ ಒಳ್ಳೆಯದೇನು? "ಅದು ಅಲ್ಲಿದೆ, ನಿಮಗೆ ತಿಳಿದಿದೆಯೆ, ಅದು ಈ ರೀತಿಯದಾಗಿದೆ" ಎಂದು ಜನರಿಗೆ ಹೇಳುತ್ತ ಸುತ್ತಾಡುವುದರಲ್ಲಿರುವ ಪ್ರಯೋಜನವೇನು? ಇಲ್ಲಿ ಪ್ರದರ್ಶಿಸಿದ ನಾಟಕ–ವೊಂದರಲ್ಲಿ "ಆದರೆ ನನಗೇನೂ ಕಂಡು ಬರುತ್ತಿಲ್ಲ" ಎಂಬ ರೀತಿಯಲ್ಲಿ ಅವರು ಉತ್ತರ ನೀಡುತ್ತಾರೆ. ಆ ನಾಟಕದ ಹೆಸರು Le Sage ಎಂದಿತ್ತು ಎಂಬುದು ನಿಮ್ಮ ನೆನಪಿಗೆ ಬರುತ್ತಿದೆಯೆ? Le Sage ನಾಟಕದಲ್ಲಿ ಸಂದೇಶ ನೀಡುವವನೊಬ್ಬ "ಭಗವಂತ ಅಲ್ಲಿದ್ದಾನೆ, ನೀವು ಹೇಳಿದ್ದನ್ನು ಕೇಳಿಸಿಕೊಳ್ಳುತ್ತಿದ್ದಾನೆ, ಅವನ ಸಾನ್ನಿಧ್ಯ ಅಲ್ಲಿದೆ" ಎಂದು ಹೇಳುತ್ತಾನೆ. ಆಗ ಯಾರೋ ಒಬ್ಬರು "ಆದರೆ ನನಗೆ ಅವನನ್ನು ನೋಡಲಾಗುತ್ತಿಲ್ಲ" ಎಂದು ಉತ್ತರ ನೀಡುತ್ತಾನೆ. ಅದಿರುವುದು ಆ ರೀತಿಯದಾಗಿದೆ.

ಆಶ್ರಮಕ್ಕೆ ಭೇಟಿ ಮಾಡಲು ಬಂದ ಕೆಲವು ಜನರು "ಇಲ್ಲಿ ಯಾವ ಆಧ್ಯಾತ್ಮಿಕತೆಯೂ ಇಲ್ಲ" ಎಂದು ಹೇಳಿದ ರೀತಿಯಲ್ಲಿ ಅದಾಗಿದೆ. ಅದನ್ನು ಅವರು ನೋಡುವುದು ಹೇಗೆ? ಯಾವ ಅಂಗದ ಸಹಾಯದಿಂದ ಅವರು ನೋಡಬಲ್ಲರು?

ಆದಾಗ್ಯೂ ಏನೋ ಒಂದು ಪ್ರಕಟವಾದಾಗ ನೀವು ಅದನ್ನು ನೋಡಲು ಶಕ್ತರಾಗುವಿರಿ ಎಂದು ಆಶಿಸುತ್ತೇನೆ.

ಸ್ವಾಭಾವಿಕವಾಗಿ, ಹಠಾತ್ತನೆ ಅಲ್ಲಿ ಪ್ರಕಾಶಮಯ ಅತಿಮಾನುಷದಂತಹ ಏನಾದರೂ ಇದ್ದರೆ ಇಲ್ಲವೆ ಭೌತಿಕ ರೂಪಗಳು ಬಾಹ್ಯದಲ್ಲಿ ಸಂಪೂರ್ಣ ಬದಲಾದರೆ ಸರಿ, ಆಗ ನಾಯಿ, ಬೆಕ್ಕು ಇಂತಹ ಪ್ರಾಣಿ ಇಲ್ಲವೆ ಬೇರೆ ಯಾವುದೂ ಅದನ್ನು ಗಮನಕ್ಕೆ ತಂದುಕೊಳ್ಳಬಲ್ಲದು, ಆದರೆ ಅದಕ್ಕೆ ಸಮಯ ಬೇಕಾಗುತ್ತದೆ. ಅದು ಸದ್ಯದಲ್ಲಿ ಕಂಡು ಬರುವುದಿಲ್ಲ, ಅದು ನಂತರದ ಬಹಳ ದೂರದ ಕಾಲದಲ್ಲಾಗಲಿದೆ. ಅದಕ್ಕಿಂತ ಮೊದಲು ಅನೇಕ ಶ್ರೇಷ್ಠ ಸಂಗತಿಗಳು ಸಂಭವಿಸುತ್ತವೆ, ಅವು ಅದಕ್ಕಿಂತ ಬಹಳ ಹೆಚ್ಚು ಮಹತ್ವದವಾಗಿರುತ್ತವೆ. ನನ್ನ ಶಬ್ದಗಳನ್ನು ಗಮನಿಸಿರಿ.

ಏಕೆಂದರೆ, ನಿಜವಾಗಿ, ಅದು ಕೇವಲ ಅರಳುತ್ತಿರುವ ಹೂವು. ಆದರೆ ಅದು ಅರಳುವುದಕ್ಕಿಂತ ಮೊದಲು, ಅದರ ಅಸ್ತಿತ್ವದ ತತ್ವ ಸಸ್ಯದ ಬೇರಿನಲ್ಲೇ ಇರಬೇಕಾಗುತ್ತದೆ.

**ಪ್ರಶ್ನೆ:** *ಅಲ್ಲಿ ಯಾವುದೊಂದರ ಪ್ರಕಟಣೆಯಾಗುವದಿದ್ದರೆ, ಅದು ಕೇವಲ ಆಧ್ಯಾತ್ಮಿಕವಾದದ್ದು ಆಗಿರುತ್ತದೆಯೇ, ಎಂದರೆ ಕೇವಲ ಯೋಗಾಚರಣೆ ಕೈಕೊಳ್ಳುತ್ತಿರುವವರು ಅದನ್ನು ಗ್ರಹಿಸಲು ಶಕ್ತರಾಗಿರುತ್ತಾರೆಯೆ ಇಲ್ಲವೆ ವಾಸ್ತವ ಸಂಗತಿಗಳ ಜಗತ್ತಿನಲ್ಲಿ ಯಾವುದೇ ಪರಿಣಾಮಗಳು ಆಗುತ್ತವೆಯೆ?*

**ಶ್ರೀಮಾತೆ:** *ನನ್ನ ಮಗು, ಇದನ್ನು ಭವಿಷ್ಯತ್ತಿನಲ್ಲಿ ಏಕೆ ಇರಿಸುತ್ತಿರುವಿ?*

ವರ್ಷಾನುವರ್ಷಗಳ ಕಾಲ ಜಗತ್ತಿನಲ್ಲಿ ಅಸಾಧಾರಣ, ಅತ್ಯುತ್ಕರ್ಷ ಪರಿಣಾಮಗಳು ಆಗಲೇ ಆಗಿವೆ. ಆದರೆ ಅದನ್ನು ನೋಡಲು ಮನುಷ್ಯನಲ್ಲಿ ಸ್ವಲ್ಪ ಜ್ಞಾನವಿರಬೇಕು. ಹಾಗಿರದಿದ್ದರೆ ಅವನು ಅವೆಲ್ಲ ಸಾಮಾನ್ಯ, ಸರ್ವಸಾಧಾರಣ ವಿಷಯಗಳೆಂದು ತೆಗೆದುಕೊಳ್ಳುತ್ತಾನೆ.– ಏಕೆಂದರೆ ಅವು ಹೇಗೆ ಸಂಭವಿಸುತ್ತವೆ ಎಂಬುದು ಕೂಡ ಅವನಿಗೆ ತಿಳಿದಿರುವುದಿಲ್ಲ.

ಹಾಗಾಗಿ ಬಹುಶಃ ಇದೂ ನಿಜವಾಗಿ ಅದೇ ವಿಷಯವಾಗುತ್ತದೆ; ಅಲ್ಲಿ ಅತ್ಯಮೋಘ ಬದಲಾವಣೆಗಳು, ಅತ್ಯುತ್ಕೃಷ್ಟ ಕ್ರಿಯೆಗಳು ಸಂಭವನೀಯವಾಗಿವೆ ಮತ್ತು, ಸರಿ, ಜನರು “ಆದರೆ ಇದು– ಸ್ವಾಭಾವಿಕವಾಗಿ ಆ ರೀತಿಯದಾಗಿದೆ” ಎಂದು ಹೇಳುತ್ತಾರೆ, ಏಕೆಂದರೆ ಅದು ಹೇಗೆ ಸಂಭವಿಸುತ್ತದೆ ಎಂಬುದು ಅವರಿಗೆ ತಿಳಿದಿರುವುದಿಲ್ಲ.

ಜಗತ್ತಿನಲ್ಲಿ ಒಂದು ಕ್ರಿಯೆ?– ಅದು ಸತತ ನಡೆದಿರುತ್ತದೆ. ಅದು ಹರಡಿಕೊಳ್ಳುವ ಏನೋ ಒಂದು ಮತ್ತು ಅದು ಎಲ್ಲೆಡೆಯಲ್ಲಿ ಕಾರ್ಯಕೈಕೊಳ್ಳುತ್ತದೆ, ಎಲ್ಲೆಡೆಯಲ್ಲಿ ಹೊಸ ಪ್ರಚೋದನೆಗಳನ್ನು, ಹೊಸ ನೆಲೆ ನಿರ್ದೇಶನಗಳನ್ನು, ಹೊಸ ವಿಚಾರಗಳನ್ನು, ಸಂಕಲ್ಪದ ಹೊಸ ಕ್ರಿಯೆಗಳನ್ನು ಹೊರಗೆ ಚೆಲ್ಲಿಕೊಡುತ್ತದೆ. ಆದಾಗ್ಯೂ ಅದು ಹೇಗೆ ಸಂಭವಿಸುತ್ತದೆ ಎಂಬುದನ್ನು ಮನುಷ್ಯ ನೋಡಲಾಗದೆ ಇರುವುದರಿಂದ, ಅವರು ಹೇಳುವ ಹಾಗೆ' "ಅತ್ಯಂತ ಸ್ವಾಭಾವಿಕವಾದದ್ದು" ಎಂದು ಯೋಚಿಸುತ್ತಾನೆ.

ಅದು ಬಹಳ ಸ್ವಾಭಾವಿಕವಾದದ್ದು, ಅದರೆ ಸರ್ವ ಸಾಧಾರಣ ಭೌತಿಕ ಪ್ರಕೃತಿಯ ಸಹಜತೆಗಿಂತ ಇನ್ನೊಂದು ಬಗೆಯದಾದದ್ದು.

**CWM, 8/9-11** **- ಶ್ರೀಮಾತೆ**

*

**ಭೌತಿಕ ಪ್ರಕೃತಿಯ ಸಹಯೋಗಗಳು (1958)**

ಓ ಪ್ರಕೃತಿ, ಭೌತಿಕ ದೈವೀ ಮಾತೆಯೆ
ನೀನು ಸಹಯೋಗ ನೀಡಲಿರುವಿ ಎಂದು ಹೇಳಿರುವಿ,
ಮತ್ತು ಈ ಸಹಯೋಗದ ಭವ್ಯತೆಗೆ ಮಿತಿಯೆಂಬುದಿಲ್ಲ.

**ಪ್ರಶ್ನೆ:** *ಮಧುರ ಮಾತೆಯವರೆ, ಈ ವರ್ಷದ ಸಂದೇಶ ಕುರಿತು ವಿವರಣೆ ನೀಡುವಿರಾ?*

**ಶ್ರೀಮಾತೆ:** ನಾನು ಒಂದೇ ವಿಷಯವನ್ನು ಕುರಿತು ಹೇಳುವವಳಿದ್ದೇನೆ. ಈ ಅನುಭವದ ಅರ್ಥವನ್ನು ನೀವು ತಪ್ಪು ರೀತಿಯಲ್ಲಿ ಮಾಡಿಕೊಳ್ಳಬಾರದು, ಹಾಗೂ ಈಗಿನಿಂದ ಪ್ರತಿಯೊಂದು ಯಾವುದೇ ತೊಂದರೆಗಳಿಲ್ಲದೆ ಸಂಭವಿಸುತ್ತದೆ ಮತ್ತು ಯಾವಾಗಲೂ ಒಂದೇ ರೀತಿಯಲ್ಲಿ ಅದು ವೈಯುಕ್ತಿಕ ಆಸೆಗಳಿಗೆ ಅನುಕೂಲಕರವಾಗಿರುತ್ತದೆ ಎಂದು ಕಲ್ಪನೆ ಮಾಡಿಕೊಳ್ಳಬಾರದು. ಅದು ಈ ಸ್ತರದ ಮೇಲಲ್ಲ. ಅದರರ್ಥ ಮಳೆ ಬರುವುದು ನಮಗೆ ಬೇಡವಾದಾಗ ಮಳೆ ಬರುವುದಿಲ್ಲ! ಜಗತ್ತಿನಲ್ಲಿ ಏನೋ ಒಂದು ಸಂಭವಿಸಲಿ ಎಂದು ನಾವು ಬಯಸಿದಾಗ ಅದು ಕೂಡಲೆ ಸಂಭವಿಸುತ್ತದೆ; ಎಲ್ಲ ತೊಂದರೆಗಳನ್ನು ತೆಗೆದು ಹಾಕಲಾಗುತ್ತದೆ ಮತ್ತು ಪ್ರತಿಯೊಂದೂ ಯಕ್ಷಿಣಿ ಕತೆ (fairy tale) ಗಳಲ್ಲಿದ್ದ

ಹಾಗಾಗುತ್ತದೆ. ಅದು ಅದಲ್ಲ. ಅದು ಹೆಚ್ಚು ಆಳಾತಿ ಆಳದಲ್ಲಿದೆ: ಪ್ರಕೃತಿ ತನ್ನ ಲೀಲೆಯಲ್ಲಿ, ಪ್ರಕಟವಾದ ಈ ಹೊಸ ದೈವೀ ಶಕ್ತಿಯನ್ನು ಸ್ವೀಕರಿಸಿದೆ ಹಾಗೂ ತನ್ನ ಚಲನೆಗಳಲ್ಲಿ ಅದನ್ನು ಒಳಗೊಂಡಿದೆ. ಮತ್ತು ಯಾವಾಗಲೂ ಇರುವ ಹಾಗೆ ಪ್ರಕೃತಿಯ ಚಲನೆಗಳು ಮಾನವ ಶ್ರೇಣಿಗಿಂತ ಅನಂತಪಟ್ಟು ಆಚೆಗಿವೆ ಹಾಗೂ ಅವು ಸರ್ವಸಾಧಾರಣ ಮಾನವ ಪ್ರಜ್ಞೆಗೆ ಗೋಚರವಾಗುವುದಿಲ್ಲ. ಅದು ಒಂದು ಆಂತರಿಕ, ಮನೋವೈಜ್ಞಾನಿಕ ಸಾಧ್ಯತೆಯಾಗಿದ್ದು ಜಗತ್ತಿನಲ್ಲಿ ಬಂದಿದೆ, ಪೃಥ್ವಿಯ ಮೇಲಿನ ನಯನಮನೋಹರ ಘಟನೆಗಳಲ್ಲಿ ಒಂದು ಎಂಬ ರೀತಿಯಲ್ಲಲ್ಲ.

ನಾನಿದನ್ನು ಹೇಳುತ್ತಿದ್ದೇನೆ, ಏಕೆಂದರೆ ಪೃಥ್ವಿಯ ಮೇಲೆ ಯಕ್ಷಿಣಿ ಕತೆಗಳು ಸಿದ್ಧಿಸಿಕೊಳ್ಳುವ ಹಂತದಲ್ಲಿದೆ ಎಂದು ನಂಬಲು ಪ್ರಲೋಭನೆಗೊಳಗಾಗಬಹುದು. ಆ ಸಮಯ ಇನ್ನೂ ಒದಗಿ ಬಂದಿಲ್ಲ.

ಘಟನೆಗಳು ಹೇಗೆ ಸಂಭವಿಸುತ್ತವೆ ಎಂಬುದನ್ನು ತಿಳಿದುಕೊಳ್ಳಲು ಮನುಷ್ಯನಲ್ಲಿ ಬಹಳ ತಾಳ್ಮೆಯಿರುವ ಹಾಗೂ ವಿಸ್ತಾರವಾದ ಹಾಗೂ ಸಂಕೀರ್ಣ ದೃಷ್ಟಿಯಿರಬೇಕು.

ಸಂಭವಿಸುತ್ತಿರುವ ಪವಾಡಗಳು ಕತೆ ಪುಸ್ತಕಗಳಲ್ಲಿ ಬರುವ ಪವಾಡಗಳ ರೀತಿಯವಲ್ಲ, ಅದರರ್ಥ ಕತೆಗಳಲ್ಲಿರುವಂತೆ ಸಂಭವಿಸುವುದಿಲ್ಲ. ಅವು ಬಹಳ ಆಳವಾದ, ಬಹಳ ವ್ಯಾಪಕವಾದ ಗ್ರಹಿಕೆಯಿರುವ ಹಾಗೂ ಬಹಳ ವಿಶಾಲ ದೃಷ್ಟಿಗೆ ಗೋಚರವಾಗುವವು.

ಅದರ ಕ್ರಿಯೆಯನ್ನು ಗುರುತಿಸಲು ಮನುಷ್ಯ ಆಗಲೇ ದೈವೀಕೃಪೆಯ ವಿಧಾನಗಳನ್ನು ಹಾಗೂ ರೀತಿಗಳನ್ನು ಅನುಸರಿಸಲು ಶಕ್ತರಾಗಬೇಕು. ವಿಷಯಗಳ ಹೆಚ್ಚು ಆಳಾತಿ ಆಳದ ಸತ್ಯವನ್ನು ನೋಡಲು ಮನುಷ್ಯ ತೋರಿಕೆಗಳಿಂದ ಕುರುಡನಂತಾಗಿರದೆ ಇರಲು ಶಕ್ತನಾಗಿರಬೇಕು.

**CWM, 9/245-46** **- ಶ್ರೀಮಾತೆ**

*

**ಪ್ರಕೃತಿಯ ಹಳೆಯ ವಿಧಾನಗಳು ಹಾಗೂ ಹೊಸದಾದ ರೀತಿ**

ಮಕ್ಕಳಿಗಾಗಿ ವರ್ಗಗಳನ್ನು ನಡೆಸುತ್ತಿರುವ ಸಮಯದಲ್ಲಿ ನಾನು ಪ್ರಕೃತಿಯ ಸೀಮಿತವಾಗಿರದ ಸಮೃದ್ಧಿ ಕುರಿತು ಮಾತನಾಡಿದ್ದೆ; ಅದು ಅಕ್ಷಯವಾದ

ಸಂಗ್ರಹವನ್ನು ಹೊಂದಿರುವ ಸೃಷ್ಟಿಕರ್ತೆ, ಅದು ಅನೇಕಾನೇಕ ರೂಪಗಳನ್ನು ಕೈಗೆತ್ತಿಕೊಳ್ಳುತ್ತದೆ, ಅವುಗಳನ್ನು ಒಟ್ಟಿಗೆ ಮಿಶ್ರಣಕ್ಕೊಳಪಡಿಸುತ್ತದೆ, ಪ್ರತ್ಯೇಕಿಸಿಡುತ್ತದೆ, ಮತ್ತೆ ಅವುಗಳಿಗೆ ಮರು ಎರಕ ಕೊಡುತ್ತದೆ, ಎಂದೆಂದಿಗೂ ಹೊಸದಾಗಿರುವ ಸಂಯೋಜನೆಗಳತ್ತ ಚಲಿಸಲು ಅವುಗಳನ್ನು ರದ್ದು ಮಾಡುತ್ತದೆ ಹಾಗೂ ನಾಶಮಾಡುತ್ತದೆ, ಅದೊಂದು ದೊಡ್ಡ ಕಡಾಯಿ ಎಂದು ನಾನು ಹೇಳಿದ್ದೇನೆ: ಅದು ವಿಷಯಗಳನ್ನು ಒಳಗೊಳಗೇ ಅಲುಗಾಡಿಸುತ್ತ ಹೊಸದಾದ ಏನೋ ಒಂದನ್ನು ಹೊರತರುತ್ತದೆ; ಅದು ಒಳ್ಳೆಯದಾಗಿರುವುದಿಲ್ಲ, ಅದನ್ನು ಮತ್ತೆ ಅದರೊಳಗೆ (ಕಡಾಯಿಯೊಳಗೆ) ಚೆಲ್ಲಿಕೊಡುತ್ತದೆ, ಮತ್ತೆ ಬೇರೆ ಏನನ್ನೋ ಕೈಗೆತ್ತಿಕೊಳ್ಳುತ್ತದೆ. ಒಂದು, ಎರಡು ಇಲ್ಲವೆ ನೂರಾರು ರೂಪಗಳಿಗೆ ಅದು ಮಹತ್ವ ಕೊಡುವುದಿಲ್ಲ, ಅಲ್ಲಿ ಸಹಸ್ರಾರು ರೂಪಗಳಿವೆ ಮತ್ತು ವರ್ಷಗಳನ್ನು ಕುರಿತು ಹೇಳುವುದಾದರೆ ನೂರಾರು, ಸಹಸ್ರಾರು, ಲಕ್ಷಗಟ್ಟಲೆ ವರ್ಷಗಳಿವೆ, ನಿಮ್ಮೆದುರಿಗೆ ಶಾಶ್ವತತೆಯೇ ಇದೆ! ಪ್ರಕೃತಿ ಇದೆಲ್ಲದರ ಸಂತೋಷ ಪಡೆಯುತ್ತದೆ ಎಂಬುದು ಸ್ಪಷ್ಟವಿದೆ ಮತ್ತು ಅದು ಅವಸರಪಟ್ಟುಕೊಳ್ಳುವುದಿಲ್ಲ. ಅದಕ್ಕೆ, ಆದ್ಯಂತವಾಗಿ, ತೀವ್ರಗತಿಯ ರಭಸದಿಂದ ಸಾಗಲು ಮತ್ತು ಈ ಅಥವಾ ಆ ಭಾಗವನ್ನು ತೀವ್ರಗತಿಯಿಂದ ಮುಕ್ತಾಯಗೊಳಿಸಲು ಹೇಳಿದರೆ, ಅದು ನೀಡುವ ಉತ್ತರ ಯಾವಾಗಲೂ ಅದೇ ಆಗಿರುತ್ತದೆ: "ಆದರೆ ನಾನು ಹಾಗೇಕೆ ಮಾಡಬೇಕು? ಅದು ನಿಮಗೆ ಮೋಜಿನದು ಎನಿಸುವುದಿಲ್ಲವೆ?"

ಈ ವಿಷಯಗಳನ್ನು ಕುರಿತು ನಿಮಗೆ ಹೇಳಿದ ದಿನ ಸಾಯಂಕಾಲ ನಾನು ನನ್ನನ್ನು ಇಡಿಯಾಗಿ ಪ್ರಕೃತಿಯೊಂದಿಗೆ ಗುರುತಿಸಿಕೊಂಡೆ, ನಾನು ಅದರ ಲೀಲೆಯಲ್ಲಿ ಕೂಡಿಕೊಂಡೆ. ಮತ್ತು ಗುರುತಿಸಿಕೊಳ್ಳುವಿಕೆ ಒಂದು ಪ್ರತ್ಯುತ್ತರ ಕೊಡುವುದಕ್ಕೆ ಪ್ರಚೋದನೆ ನೀಡಿತು, ನನ್ನ ಹಾಗೂ ಪ್ರಕೃತಿಯ ನಡುವೆ ಒಂದು ಬಗೆಯ ಹೊಸ ಆತ್ಮೀಯತೆಯನ್ನುಂಟು ಮಾಡಿತು, ಅದು ಹತ್ತಿರದಲ್ಲಿ ಬೆಳೆಯುವಿಕೆಯ ದೀರ್ಘ ಚಲನೆಯಾಗಿತ್ತು, ನವ್ಹೆಂಬರ ಎಂಟರಂದು ಪರಾಕಾಷ್ಠೆ ತಲುಪಿರುವ ಅನುಭವ ನೀಡಿತು.

ಹಠಾತ್ತನೆ ಪ್ರಕೃತಿ ತಿಳಿದುಕೊಂಡಿತು, ಇದೀಗ ಜನ್ಮತಾಳಿದ ಹೊಸ ಪ್ರಜ್ಞೆ ತನ್ನನ್ನು ತಿರಸ್ಕರಿಸುವುದನ್ನು ಅರಸುವುದಿಲ್ಲ. ಆದರೆ ತನ್ನನ್ನು ಇಡಿಯಾಗಿ ಅಪ್ಪಿಕೊಳ್ಳಲು ಬಯಸುತ್ತದೆ, ಈ ಹೊಸ ಆಧ್ಯಾತ್ಮಿಕತೆ ಜೀವನದಿಂದ

ಹೊರಳಿಕೊಳ್ಳುವುದಿಲ್ಲ, ಗಾಬರಿಗೊಳಿಸುವ ಅದರ ವೈಶಾಲ್ಯತೆಯ ಎದುರಿಗೆ ಹಿಂಜರಿಯುವುದಿಲ್ಲ, ಆದರೆ ತದ್ವಿರುದ್ಧವಾಗಿ ಅದರ ಎಲ್ಲ ಮುಖಗಳನ್ನು ಸಮಗ್ರಗೊಳಿಸಲು ಬಯಸುತ್ತದೆ. ಇಲ್ಲಿ ಅತಿ ಮಾನಸ ಪ್ರಜ್ಞೆಯಿರುವುದು ತನ್ನನ್ನು ಕುಗ್ಗಿಸುವುದಕ್ಕಲ್ಲ ಆದರೆ ಪೂರ್ತಿಗೊಳಿಸುವುದಕ್ಕಾಗಿ ಇದೆ ಎಂಬುದನ್ನು ಪ್ರಕೃತಿ ತಿಳಿದುಕೊಂಡಿತು.

ಆಗ ಪರಮೋಚ್ಚ ದೈವೀ ನೈಜತೆಯಿಂದ ಈ ಆಜ್ಞೆ ಬಂದಿತು: "ಓ ಪ್ರಕೃತಿಯೆ, ಸಹಯೋಗ ನೀಡುವ ಈ ಸಂತೋಷಕ್ಕೆ ಎಚ್ಚತ್ತುಕೋ." "ನಾನು ಒಪ್ಪಿಕೊಳ್ಳುತ್ತೇನೆ, ಸಹಯೋಗ ನೀಡುತ್ತೇನೆ" ಎಂದು ಹೇಳುತ್ತ ಇಡೀ ಪ್ರಕೃತಿ ಉಕ್ಕಿಹರಿಯುವ ಸಂತೋಷದಿಂದ ಹಠಾತ್ತನೆ ರಭಸದಿಂದ ಮುಂದೆ ಬಂದಿತು. ಅದೇ ವೇಳೆಗೆ ಅಲ್ಲಿ ಸ್ಥಿರವಾಗಿದ್ದ, ಪರಿಪೂರ್ಣ ಪ್ರಶಾಂತತೆ ಬಂದಿತು, ಅದರಿಂದಾಗಿ ದೈಹಿಕ ಪಾತ್ರೆ, ಮುರಿದು ಹೋಗದೆ, ಏನನ್ನೂ ಕಳೆದುಕೊಳ್ಳದೆ ಸ್ವೀಕರಿಸುವಂತಾಯಿತು, ಒಳಗೊಳ್ಳುವಂತಾಯಿತು. ಪ್ರಕೃತಿಯ ಈ ಸಂತೋಷದ ಅಧಿಕ ಬಲದ ಪ್ರವಾಹ ಕೃತಜ್ಞತೆಯ ಒಂದು ಚಲನೆಯ ರೂಪದಲ್ಲಿ ರಭಸದಿಂದ ಮುಂದೆ ಬಂದಿತ್ತು. ಪ್ರಕೃತಿ ಒಪ್ಪಿಕೊಂಡಿತು, ತನ್ನ ಎದುರಿಗಿರುವ ಎಲ್ಲ ಶಾಶ್ವತತೆಯೊಂದಿಗೆ ಈ ಅತಿಮಾನಸ ಪ್ರಜ್ಞೆ ಅದಕ್ಕೆ ಹೆಚ್ಚಿನ ಪರಿಪೂರ್ಣತೆಯಿಂದ ನೆರವೇರಿಕೆ ತಂದುಕೊಡುತ್ತದೆ, ತನ್ನ ಚಲನೆಗೆ ಇನ್ನೂ ಶ್ರೇಷ್ಠತರ ಬಲವನ್ನು ಕೊಡುತ್ತದೆ, ಶ್ರೇಷ್ಠತರ ವೈಶಾಲ್ಯವನ್ನು ನೀಡುತ್ತದೆ, ತನ್ನ ಲೀಲೆಗೆ ಹೆಚ್ಚಿನ ಸಾಧ್ಯತೆಗಳನ್ನು ಒದಗಿಸುತ್ತದೆ ಎಂಬುದನ್ನು ಅದು ನೋಡಿತು.

ಸೂಕ್ಷ್ಮ ಭೌತಿಕದಲ್ಲಿ ಮನುಷ್ಯನಿಗೆ ಕೇಳಿಬರುವ ಶ್ರೇಷ್ಠತರ ನಾದಗಳಂತಹವು. ಪೃಥ್ವಿಯ ಎಲ್ಲ ಮೂಲೆಗಳಿಂದ ಬರುತ್ತಿರುವುದನ್ನು ನಾನು ಹಠಾತ್ತನೆ ಕೇಳಿಸಿಕೊಂಡೆ. ಅವು ಬೀಥೋವೆನ್ (Beethhoven)ನ Concerto in D-major ನಲ್ಲಿದ್ದ ಹಾಗಿದ್ದವು, ಅವು ಶ್ರೇಷ್ಠ ಪ್ರಗತಿಯಾಗುತ್ತಿರುವ ಕ್ಷಣಗಳಲ್ಲಿ ಬರುತ್ತವೆ. ಅದು ಐವತ್ತು ವಾದ್ಯಮೇಳಗಳು ಒಂದೇ ಶ್ರುತಿಯಲ್ಲಿ, ಒಂದೂ ಮಿಥ್ಯೆಯ ನಾದವಿಲ್ಲದೆ ಸ್ಫೋಟಿಸಿ ಬಂದ ಹಾಗಿತ್ತು, ಪ್ರಕೃತಿ ಹಾಗೂ ದಿವ್ಯಾತ್ಮ ಇವರ ನಡುವೆ ಈ ಹೊಸ ಸಂಸರ್ಗದ ಸಂತೋಷವನ್ನು ಅಭಿವ್ಯಕ್ತಪಡಿಸಿದಂತಿತ್ತು; ಹಳೆಯ ಸ್ನೇಹಿತರು ಬಹಳ ದೀರ್ಘ ಕಾಲದವರೆಗೆ ಪ್ರತ್ಯೇಕಗೊಂಡು ಮತ್ತೆ ಒಟ್ಟಿಗೆ ಬಂದ ರೀತಿಯದಾಗಿತ್ತು.

ನಂತರ ಈ ಶಬ್ದಗಳು ಬಂದವು: "ಓ ಪ್ರಕೃತಿ, ಭೌತಿಕ ದೈವೀ ಮಾತೆಯೆ, ನೀನು ಸಹಯೋಗ ನೀಡುತ್ತೇನೆ ಎಂದು ಹೇಳಿರುವಿ, ಈ ಸಹಯೋಗದ ಭವ್ಯತೆಗೆ ಮಿತಿ ಎಂಬುದಿಲ್ಲ."

ಮತ್ತು ಈ ಭವ್ಯತೆಯ ತೇಜೋರಾಶಿಯನ್ನು ಹರಡುವ ಆನಂದ ಸ್ಥಿತಿಯನ್ನು ಪರಿಪೂರ್ಣ ಶಾಂತಿಯಲ್ಲಿ ಭಾವನೆಗೆ ತಂದುಕೊಳ್ಳಲಾಗಿತ್ತು.

ಆ ರೀತಿಯಲ್ಲಿ ಹೊಸವರ್ಷದ ಸಂದೇಶ ಜನ್ಮತಾಳಿ ಬಂದಿತು.

**CWM, 9/247-48** **- ಶ್ರೀಮಾತೆ**

*

**ಹೊಸ ಜಗತ್ತಿನ ಬೀಜಗಳು (1959)**

**ಅಚೇತನದ ತಳಭಾಗದಲ್ಲಿಯೇ ಅತ್ಯಂತ ಬಿರುಸಾದ, ಬಳುಕದ ಹಾಗೂ ಸಂಕುಚಿತ, ಅಡ್ಡಿಪಡಿಸುವ ರೀತಿಯಲ್ಲಿರುವುದರಲ್ಲಿ ಸರ್ವಸಮರ್ಥ ಚಿಲುಮೆಯೊಂದು ನನ್ನ ಕಣ್ಣನ್ನು ಸೆಳೆಯಿತು, ಅದು ನನ್ನನ್ನು ತತ್ಕ್ಷಣ ಒಂದು ರೂಪರಹಿತ, ಮಿತಿರಹಿತ ವೈಶಾಲ್ಯದಲ್ಲಿ ಒಂದು ಹೊಸ ಜಗತ್ತಿನ ಬೀಜಗಳೊಂದಿಗೆ ಕಂಪಿಸುತ್ತ ಎಸೆದುಬಿಟ್ಟಿತು.**

'ಅತ್ಯಂತ ಬಿರುಸಾದ, ಬಳುಕದ ಅಚೇತನದ ತಳಭಾಗದಲ್ಲಿಯೇ.......' ಏಕೆಂದರೆ, ಸರ್ವಸಾಧಾರಣವಾಗಿ, ಅಚೇತನ, ನಿಖರವಾಗಿ, ಅವ್ಯವಸ್ಥಿತ, ಜಡ, ರೂಪರಹಿತ, ನೀರಸ, ನಿರುತ್ಸಾಹಕರ ಆಗಿರುವ ಭಾವನೆ ತಂದುಕೊಡುತ್ತದೆ (ಈ ಹಿಂದೆ ಅಪ್ರಜ್ಞೆಯ ವಲಯಗಳನ್ನು ನಾನು ಪ್ರವೇಶಿಸಿದಾಗ ಎದುರಿಸಿದ್ದು ಅದೇ ಮೊದಲ ವಿಷಯವಾಗಿತ್ತು.) ಆದರೆ ಇದು ಒಂದು ಅಚೇತನದ್ದಾಗಿತ್ತು... ಅದು ಬಿರುಸಾದದ್ದು, ಬಳುಕದಂತಹದು, ಘನರೂಪಕ್ಕೆ ತಿರುಗಿಸಿದಂತಹದು ಆಗಿತ್ತು, ವಿರೋಧಿಸಲೆಂದೇ ಅದನ್ನು ಘನರೂಪಕ್ಕೆ ತಿರುಗಿಸಲಾಗಿತ್ತು. ಎಲ್ಲ ಪ್ರಯತ್ನ ಅದನ್ನು ಜಾರಿ ಹೋಗುತ್ತದೆ, ಅದನ್ನು ಸ್ಪರ್ಶಿಸುವುದಿಲ್ಲ, ಅದರೊಳಗೆ ನುಗ್ಗಿ ಹೋಗಲಾರದು. ಹಾಗಾಗಿ ನಾನು 'ಅತಿ ಬಿರುಸಾದದ್ದು, ಬಳುಕದಂತಹದು ಹಾಗೂ ಸಂಕುಚಿತವಾದದ್ದು' ಎಂದು ಅದನ್ನು ಕುರಿತು ಈ ಶಬ್ದಗಳನ್ನಿರಿಸುತ್ತಿದ್ದೇನೆ (ಒತ್ತಿ ಹಿಡಿಯುತ್ತಿರುವ ಏನೋ ಒಂದರ ವಿಚಾರ.)– ಹೌದು ಪ್ರತಿಬಂಧಿಸು–ವಂತಹದು.

'ಸರ್ವಸಮರ್ಥ ಚಿಲುಮೆಯೊಂದು ನನ್ನ ಕಣ್ಣನ್ನು ಸೆಳೆಯಿತು, ಅದು ನನ್ನನ್ನು ತತ್ಕ್ಷಣ ಒಂದು ರೂಪರಹಿತ, ಮಿತಿರಹಿತ ವೈಶಾಲ್ಯದಲ್ಲಿ, ಎಲ್ಲ ಸೃಷ್ಟಿಯ ಉತ್ಪಾದಕವಾದುದರಲ್ಲಿ ಎಸೆದು ಬಿಟ್ಟಿತು..' ಹೌದು, ಅದು ಸರ್ವಸಾಧಾರಣ, ಆದಿಸ್ವರೂಪದ ಸೃಷ್ಟಿಯಾಗಿರಲಿಲ್ಲ ಎಂಬ ಭಾವನೆ ನನಗೆ ಬರುತ್ತಿದೆ, ಆದರೆ ಅತಿಮಾನಸ ಸೃಷ್ಟಿಯಾಗಿತ್ತು, ಏಕೆಂದರೆ ಪ್ರತಿಯೊಂದರ ಮೂಲವಾದ ಪರಮೋಚ್ಚನೆಡೆಗೆ ಮರಳಿ ಹೋಗುವ ಅನುಭವಕ್ಕೆ ಅನುಗುಣವಾದದ್ದನ್ನು ಅದು ಹೊತ್ತುಕೊಂಡಿರಲಿಲ್ಲ. ಸಂಪೂರ್ಣವಾಗಿ ಅತಿಮಾನಸ ಸೃಷ್ಟಿಯ ಮೂಲದಲ್ಲಿ ಎಸೆದುಬಿಟ್ಟಿರುವ ಭಾವನೆ ನನಗೆ ಬಂದಿತು – ಅತಿಮಾನಸ ಸೃಷ್ಟಿಯ ಸುಸ್ಪಷ್ಟ ಗುರಿಯೊಂದಿಗೆ ಪರಮೋಚ್ಚನಿಂದ ಆಗಲೇ ವಸ್ತುನಿಷ್ಠವಾಗಿರಿಸಿದ ಏನೋ ಒಂದು (ಅದನ್ನು ಅಭಿವ್ಯಕ್ತಪಡಿಸುವುದು ಹೇಗೆ?).

ಅದು ನನ್ನ ಭಾವನೆಯಾಗಿತ್ತು.

ನಾನು ತಪ್ಪು ಭಾವನೆ ತಂದುಕೊಂಡಿದ್ದೇನೆ ಎಂದು ನನಗನಿಸುವುದಿಲ್ಲ. ಏಕೆಂದರೆ ಅಲ್ಲಿ ಅದೆಂತಹ ಸಾಮರ್ಥ್ಯದ, ಬೆಚ್ಚಗಿನ ಅನುಭವದ, ಸ್ವರ್ಣದ ಅತಿ (ಜನವರಿ 1, 1959 ರ ನಿಮಿತ್ತ ಶ್ರೀಮಾತೆಯವರು ನೀಡಿದ್ದ ಸಂದೇಶದಲ್ಲಿ ನಂತರ ಒಂದು ಬದಲಾವಣೆಯನ್ನು ಮಾಡಿದರು: ಒಂದು ಸರ್ವಸಮರ್ಥ ಚಿಲುಮೆ ನನ್ನನ್ನು ತತ್ಕ್ಷಣ ಒಂದು ರೂಪರಹಿತ ವೈಶಾಲ್ಯದಲ್ಲಿ, ಹೊಸ ಜಗತ್ತಿನ ಉತ್ಪಾದಕವಾದುದರಲ್ಲಿ ಚೆಲ್ಲಿಕೊಟ್ಟಿತು. ಇದರ ಬದಲಾಗಿ 'ಒಂದು ರೂಪರಹಿತ, ಮಿತಿರಹಿತ ವೈಶಾಲ್ಯದಲ್ಲಿ ಒಂದು ಹೊಸ ಜಗತ್ತಿನ ಬೀಜಗಳೊಡನೆ ಕಂಪಿಸುತ್ತ ಎಸೆದುಬಿಟ್ಟಿತು' ಎಂಬುದನ್ನು ಇರಿಸಿದ್ದಾರೆ.) ಸಮೃದ್ಧಿಯ ಭಾವನೆಯಿತ್ತು. ಅದು ದ್ರವ ಸ್ವರೂಪದ್ದಾಗಿರಲಿಲ್ಲ. ಪುಡಿ ಉದುರಿಸಿದ ರೀತಿಯದಾಗಿತ್ತು. ಈ ವಿಷಯಗಳಲ್ಲಿ ಪ್ರತಿಯೊಂದು (ಅವುಗಳನ್ನು ಬೊಟ್ಟಿನ ಗುರುತುಗಳೆಂದು ಇಲ್ಲವೆ ಬಿಂದುಗಳೆಂದು ಕರೆಯಲಾಗದು. ಗಣಿತ ಅರ್ಥದಲ್ಲಿ ಸ್ಥಳಾವಕಾಶವನ್ನು ಆಕ್ರಮಿಸದ ಬಿಂದುವೆಂದು ತಿಳಿದುಕೊಂಡಿರಬೇಕು.) ಗಣಿತದಲ್ಲಿ ಬರುವ ಬಿಂದುಗಳಿಗೆ ಸರಿಸಮಾನವಾದ ಏನೋ ಒಂದಾಗಿತ್ತು, ಆದರೆ ಜೀವಂತವಿರುವ ಸುವರ್ಣದ ಹಾಗಿತ್ತು. ಬೆಚ್ಚಗಿರುವ ಅನುಭವ ಕೊಡುವ ಉದುರುವ ಪುಡಿಯ ಹಾಗಿತ್ತು. ಅದು ಥಳಥಳಿಸುತ್ತ ಇತ್ತೆಂದು ಇಲ್ಲವೆ ಕಪ್ಪಾಗಿತ್ತೆಂದು, ಪ್ರಕಾಶದಿಂದ ಮಾಡಲಾಗಿತ್ತೆಂದು ಹೇಳಲಾರೆ, ಅದು ಗುಂಪುಗೂಡಿದ್ದ ಸುವರ್ಣದ ಚಿಕ್ಕ

ಬಿಂದುಗಳಿಂದ ಕೂಡಿತ್ತು, ಅದಷ್ಟೇ, ಬೇರೇನೂ ಇಲ್ಲ. ಅವು ನನ್ನ ಕಣ್ಣುಗಳನ್ನು, ಮುಖವನ್ನು ಎಷ್ಟೊಂದು ಅಂತರ್ನಿಹಿತ ಸಾಮರ್ಥ್ಯದೊಂದಿಗೆ, ಬೆಚ್ಚಗಿರಿಸುವ ಭಾವನೆಯೊಂದಿಗೆ ಸ್ಪರ್ಶಿಸುತ್ತಿದ್ದ ಹಾಗೆ ತೋರಿಬರುತ್ತಿದ್ದವೆಂದರೆ ಅದೊಂದು ಭವ್ಯಸ್ವರೂಪದ್ದಾಗಿತ್ತು! ಮತ್ತು ಅದೇ ವೇಳೆಗೆ, ಪೂರ್ಣತೆಯ, ಸರ್ವಸಮರ್ಥ–ವಾದುದರ ದೈವೀ ಶಾಂತಿ ಇರುವ ಭಾವನೆಯಿತ್ತು. ಅದು ಶ್ರೀಮಂತವಾಗಿತ್ತು, ತುಂಬಿಕೊಂಡಿತ್ತು. ಅದು ಅದರ ಪರಮಾವಧಿಯ ಚಲನೆಯಾಗಿತ್ತು. ಮನುಷ್ಯ ಕಲ್ಪನೆ ಮಾಡಿಕೊಳ್ಳಲಾರದಷ್ಟು ಅನಂತಪಟ್ಟು ತೀವ್ರಗತಿಯದಾಗಿತ್ತು, ಅದೇ ವೇಳೆಗೆ ಅದು ಪರಿಪೂರ್ಣ ಶಾಂತಿ, ಪರಿಪೂರ್ಣ ಪ್ರಶಾಂತತೆ ಆಗಿತ್ತು.

**ಅನುಯಾಯಿಯೊಡನೆ ಮಾತುಕತೆ, Nov.8, 1958 – ಶ್ರೀಮಾತೆ**

*

**ಪ್ರಶ್ನೆ:** *ಈ ಚಿಲುಮೆಯೆಂದರೇನು?*

**ಶ್ರೀಮಾತೆ:** ಚಿಲುಮೆಯೇ? ಅದರ ಅರ್ಥ ನಿಖರವಾಗಿ ಹೀಗಿದೆ: ಅಚೇತನದ ಆಳಾತಿ ಆಳದ ಆಳಗಳಲ್ಲಿ ಪರಮೋಚ್ಚ ಚಿಲುಮೆಯಿದೆ, ಅದು ನಾವು ಪರಮೋಚ್ಚನನ್ನು ಸ್ಪರ್ಶಿಸುವಂತೆ ಮಾಡುತ್ತದೆ. ಅದು ಪರಮೋಚ್ಚನು ಪರಮೋಚ್ಚನನ್ನು ನಾವು ಸ್ಪರ್ಶಿಸುವಂತೆ ಮಾಡುವುದಾಗಿದೆ; ಅದೇ ಸರ್ವಸಾಮರ್ಥ್ಯವುಳ್ಳ ಚಿಲುಮೆ, ಅಚೇತನದ ಅತ್ಯಂತ ತಳಭಾಗವನ್ನು ನೀವು ತಲುಪಿದಾಗ ನೀವು ಪರಮೋಚ್ಚನನ್ನು ಸ್ಪರ್ಶಿಸುತ್ತೀರಿ.

**ಪ್ರಶ್ನೆ:** *ಹಾಗಾಗಿ ಅದೇ ಅತ್ಯಂತ ಕಿರಿದಾದ ಮಾರ್ಗವೆ?*

**ಶ್ರೀಮಾತೆ :** ಅದು ಅತಿ ಚಿಕ್ಕದಾದ ಮಾರ್ಗವಲ್ಲ. ಈಗಾಗಲೆ ನನಗೆ ಅಚೇತನದ ತಳವನ್ನು ಸ್ಪರ್ಶಿಸುವುದು ಕಠಿಣವಾಗಿತ್ತು, ಇತರರಿಗೆ ಅನಂತಕಾಲ ಬೇಕಾಗುತ್ತದೆ.

ಅದು ಶ್ರೀ ಅರವಿಂದರು 'ದೇವನ ಶ್ರಮ' ಲೇಖನದಲ್ಲಿ ಬರೆದುದಕ್ಕೆ ಸಮನಾಗಿರುವ ಏನೋ ಒಂದು.

**ಪ್ರಶ್ನೆ:** *ಅಚೇತನದ ಅತಿ ಕೆಳಗಿನ ಭಾಗದಲ್ಲಿರುವ ಪರಮೋಚ್ಚನು ನಿಮ್ಮನ್ನು ನೇರವಾಗಿ ಪರಮೋಚ್ಚನತ್ತ ಎಸೆದನೆ?*

**ಶ್ರೀಮಾತೆ:** ಹೌದು. ಏಕೆಂದರೆ ಅಚೇತನದ ತಳಭಾಗದಲ್ಲಿಯೇ ಪರಮೋಚ್ಚನಿದ್ದಾನೆ.

ಅತ್ಯುಚ್ಚ ಎತ್ತರ ಅತ್ಯಂತ ಆಳವಾದುದನ್ನು ಸ್ಪರ್ಶಿಸುವ ಅದೇ ವಿಚಾರ ಅಲ್ಲಿದೆ. ವಿಶ್ವ ಒಂದು ವೃತ್ತವಿದ್ದ ಹಾಗಿದೆ– ಅದು ಸರ್ಪ ತನ್ನ ಬಾಲವನ್ನು ಕಡಿದುಕೊಳ್ಳುವುದನ್ನು ಪ್ರತಿನಿಧಿಸುತ್ತದೆ, ಅದರ ತಲೆ ಅದರ ಬಾಲವನ್ನು ಸ್ಪರ್ಶಿಸುತ್ತದೆ, ಅದರರ್ಥ ಪರಮೋಚ್ಚ ಎತ್ತರ ಅತ್ಯಂತ ಭೌತಿಕವಾದದ್ದನ್ನು, ನಡುವೆ ಯಾವ ಮಧ್ಯಸ್ತಿಕೆ ಇಲ್ಲದೆ ಸ್ಪರ್ಶಿಸುತ್ತದೆ. ಇದನ್ನು ಈಗಾಗಲೆ ಹಲವಾರು ಸಲ ಹೇಳಿದ್ದೇನೆ.

ಅಚೇತನದ ಈ ದರ್ಶನ... (ಶ್ರೀಮಾತೆಯವರು ಒಂದು ಕ್ಷಣ ನೆಟ್ಟ ನೋಟದಿಂದ ನೋಡುತ್ತ ಉಳಿದುಕೊಳ್ಳುತ್ತಾರೆ.) ಮಾನಸಿಕ ಅಚೇತನದ್ದಾಗಿತ್ತು. ಏಕೆಂದರೆ ಪ್ರಾರಂಭ ಬಿಂದು ಮಾನಸಿಕದ್ದಾಗಿತ್ತು. ಒಂದು ವಿಶಿಷ್ಟ ಅಚೇತನ– ಬಳುಕದಂತಹದು, ಬಿರುಸಾದದ್ದು, ವಿರೋಧಿಸುವಂತಹದು– ನಮ್ಮ ಪ್ರಜ್ಞೆಯಲ್ಲಿ ಮನಸ್ಸು ತಂದದ್ದೆಲ್ಲದರ ಅಚೇತನ ಆದರೆ ಅದು ಕೇವಲ ಭೌತಿಕ ಅಚೇತನಕ್ಕಿಂತ ಬಹಳ ಹೆಚ್ಚು ಕೆಟ್ಟದ್ದಾಗಿತ್ತು! ಒಂದು 'ಮಾನಸೀಕರಣಗೊಂಡ ಅಚೇತನದ ಹಾಗಿತ್ತು. ಈ ಎಲ್ಲ ಬಳುಕದಿರುವಿಕೆ, ಈ ಬಿರುಸಾಗಿರುವಿಕೆ, ಈ ಸಂಕುಚಿತತೆ, ಈ ಸ್ಥಿರತೆ – ಅದು ಸೃಷ್ಟಿಯಲ್ಲಿರುವ ಮನಸ್ಸಿನ ಸಾನ್ನಿಧ್ಯದಿಂದ ಬರುತ್ತದೆ. ಮನಸ್ಸು ಪ್ರಕಟವಾಗದೆ ಇದ್ದಾಗ ಅಚೇತನ ಅ ರೀತಿಯದಾಗಿರಲಿಲ್ಲ! ಅದು ರೂಪರಹಿತವಾಗಿತ್ತು. ರೂಪರಹಿತವಾದ ಏನೋ ಒಂದರ ನಮ್ಯತೆಯನ್ನು ಹೊಂದಿತ್ತು. ಆ ನಮ್ಯತೆ ಹೋಗಿಬಿಟ್ಟಿತ್ತು.

ಅದು ಅಚೇತನದಲ್ಲಿ ಮನಸ್ಸಿನ ಕ್ರಿಯೆಯ ಭಯಾನಕ ಪ್ರತೀಕವಾಗಿದೆ.

ಅದು ಅಚೇತನವನ್ನು ಆಕ್ರಮಣಕಾರಿಯನ್ನಾಗಿ ಮಾಡಿದೆ– ಮೊದಲು ಹಾಗಿರಲಿಲ್ಲ. ಅದು ಆಕ್ರಮಣಕಾರಿ, ವಿರೋಧಿಸುವಂತಹದು, ಹಟಮಾರಿ ಇದೆಲ್ಲ ಆಗಿದೆ. ಇದು ಮೊದಲು ಅಲ್ಲಿರಲಿಲ್ಲ.

ಹೌದು, ಅದೇ ಅದು. ಅದು ಮೂಲದಲ್ಲಿದ್ದ ಅಚೇತನವಾಗಿರಲಿಲ್ಲ. ಅದು ಮಾನಸೀಕರಣಗೊಂಡ ಅಚೇತನ. ವಿರೋಧಿಸುವ ರೀತಿಯಲ್ಲಿ ಮನಸ್ಸು ತಂದದ್ದೆಲ್ಲದರ ಜೊತೆಗಿದೆ– ಪ್ರತಿರೋಧ ಬಿರುಸಾಗಿರುವಿಕೆ ಬಳುಕದೆ ಇರುವುದು.

ನನಗೆ ಒಮ್ಮೆ ಮೊದಲಾದ ಮೂಲ ಅಚೇತನದ ಅನುಭವ ಅದಲ್ಲ. ಈ ಸಲ ನನಗಾದ ಅನುಭವ ಸೃಷ್ಟಿಯಲ್ಲಿ ಮನಸ್ಸಿನ ಪ್ರಭಾವಕ್ಕೆ ಒಳಗಾಗಿದ್ದರದಾಗಿದೆ.

ಅದು ಮೊದಲಿದ್ದುದಕ್ಕಿಂತ ಅತ್ಯಂತ ಭವ್ಯ ಅಡೆತಡೆಯಾಗಿದೆ. ಮೊದಲು ಅದಕ್ಕೆ ವಿರೋಧಿಸುವ ಸಾಮರ್ಥ್ಯ ಕೂಡ ಇರಲಿಲ್ಲ. ಅದರಲ್ಲೇನೂ ಇರಲಿಲ್ಲ, ಅದು ನಿಜವಾಗಿ ಅಚೇತನದ್ದಾಗಿತ್ತು. ಈಗ ಅದು ಬದಲಾಗಲು ತಿರಸ್ಕರಿಸುವುದರಲ್ಲಿ ಸಂಘಟಿತಗೊಂಡ ಅಚೇತನವಾಗಿದೆ!

ಅದು ಬಹಳ ಹೊಸ ಅನುಭವವಾಗಿತ್ತು.

ನಾವು ಈಗ ಆ ಹಂತದಲ್ಲಿದ್ದೇವೆ.

ಮತ್ತು ಈ ಸರ್ವಸಮರ್ಥ ಚಿಲುಮೆ ಸಂಭವಿಸುತ್ತಿರುವುದರ ಪರಿಪೂರ್ಣ ಪ್ರತೀಕವಾಗಿದೆ– ಪ್ರತಿಯೊಬ್ಬನಿಗೂ ಏನು ಸಂಭವಿಸಬೇಕು, ಏನು ಸಂಭವಿಸಲಿದೆ: ಹಠಾತ್ತನೆ ವೈಶಾಲ್ಯದಲ್ಲಿ ಮನುಷ್ಯನನ್ನು ಮುಂದುಗಡೆ ಎಸೆಯಲಾಗುತ್ತದೆ.

**ಅನುಯಾಯಿಯೊಂದಿಗೆ ಮಾತುಕತೆ, ನವ್ವೆಂಬರ 1958, – ಶ್ರೀಮಾತೆ**

*

**ದೈವೀ ಸತ್ಯದ ಆಗಮನ (1965)**

**ದೈವೀ ಸತ್ಯದ ಆಗಮನಕ್ಕೆ ಪ್ರಣಾಮ**

**ಪ್ರಶ್ನೆ:** *ಮಧುರ ಮಾತೆಯವರೆ, ನಿಮ್ಮ ಹೊಸವರ್ಷದ ಸಂದೇಶದಲ್ಲಿ "ದೈವೀ ಸತ್ಯದ ಆಗಮನಕ್ಕೆ ಪ್ರಣಾಮ" ಎಂದು ನೀವು ಹೇಳಿರುವಿರಿ. ಹಾಗಾಗಿ ಅದು ಬಹಳ ಹತ್ತಿರ ಬಂದಿದೆಯೆ? 1965ರ ಅವಧಿಯಲ್ಲಿ ಅದನ್ನು ಗುರುತಿಸಲು ಹಾಗೂ ಸ್ವೀಕರಿಸಲು ನಾವು ಕೈಕೊಳ್ಳಬೇಕಾದುದೇನು?*

**ಶ್ರೀಮಾತೆ:** ಕೈಕೊಳ್ಳಬಹುದಾದ ಅತ್ಯಂತ ಒಳ್ಳೆಯ ಕಾರ್ಯವೆಂದರೆ ಮನುಷ್ಯ ತನ್ನಲ್ಲಿರುವ ಎಲ್ಲ ಚಲನೆಗಳ ಮೂಲವನ್ನು ವಿಭಜಿಸಿ ನೋಡಬೇಕು– ಸತ್ಯದ ಪ್ರಕಾಶದಿಂದ ಬರುವಂತಹವುಗಳು ಮತ್ತು ಹಳೆಯ ಜಡತ್ವ ಹಾಗೂ ಮಿಥ್ಯೆ ಇವುಗಳಿಂದ ಬರುವಂತಹವುಗಳು– ಇವುಗಳಲ್ಲಿ ಮೊದಲು ಬರುವವುಗಳನ್ನು ಒಪ್ಪಿಕೊಳ್ಳಬೇಕು, ಉಳಿದವುಗಳನ್ನು ತಿರಸ್ಕರಿಸಬೇಕು ಇಲ್ಲವೆ ನಿರಾಕರಿಸಬೇಕು.

ಆಚರಣೆಯೊಂದಿಗೆ ಮನುಷ್ಯ ಹೆಚ್ಚು ಸ್ಪಷ್ಟವಾಗಿ ವಿಭಜಿಸುವುದನ್ನು ಕಲಿತುಕೊಳ್ಳುತ್ತಾನೆ, ಆದರೆ ಅವನು ಸರ್ವಸಾಧಾರಣ ನಿಯಮವೊಂದನ್ನು

ಸ್ಥಾಪಿಸಬಲ್ಲನು, ಅದೆಂದರೆ : ಸಾಮರಸ್ಯವಿಲ್ಲದ್ದರತ್ತ, ಅವ್ಯವಸ್ಥೆಯತ್ತ ಹಾಗೂ ಜಡತ್ವದತ್ತ ಪ್ರವೃತ್ತಿ ಹೊಂದಿದ್ದೆಲ್ಲವೂ ಮಿಥ್ಯೆಯಿಂದ ಬರುತ್ತದೆ ಮತ್ತು ಏಕತೆ, ಸಾಮರಸ್ಯ, ಕ್ರಮಬದ್ಧತೆ ಹಾಗೂ ಪ್ರಜ್ಞೆ ಇವುಗಳಿಗೆ ಎಡೆಗೊಡುವುದೆಲ್ಲ ದೈವೀ ಸತ್ಯದಿಂದ ಬರುತ್ತದೆ.

ಮಾರ್ಗದ ಮೇಲೆ ಮೊದಲ ಹೆಜ್ಜೆಗಳನ್ನು ಹೇಗೆ ಇರಿಸಬೇಕು ಎಂಬುದಕ್ಕೆ ಇದು ಕೇವಲ ಒಂದು ಸೂಕ್ಷ್ಮ ಸೂಚನೆ, ಅದಕ್ಕಿಂತ ಹೆಚ್ಚಿನದೇನಲ್ಲ.

**CWM, 16/311** **- ಶ್ರೀಮಾತೆ**

*

**ದೈವೀ ಸತ್ಯ ಇಲ್ಲವೆ ಅಧೋಲೋಕ (1967)**

**ಜನರೇ, ದೇಶಗಳೇ, ಖಂಡಗಳೇ!**

**ದೈವೀ ಸತ್ಯ ಹಾಗೂ ಅಧೋಲೋಕ ಇವೆರಡರ ನಡುವೆ ಆಯ್ಕೆ ಆಜ್ಞಾರ್ಥಕವಾಗಿದೆ**

**ಪ್ರಶ್ನೆ:** *1967ರ ಹೊಸ ವರ್ಷದ ಸಂದೇಶ ಕುರಿತು ನೀವು ಆಯ್ಕೆ ದೈವೀಸತ್ಯ ಹಾಗೂ ಅಧೋಲೋಕ ಇವೆರಡರ ನಡುವೆ ಇದೆ ಎಂದು ಹೇಳಿರುವಿರಿ. ಅಧೋಲೋಕ ಅಗಲವಾಗಿ ಬಾಯ್ತೆರೆದುಕೊಂಡು ನಮ್ಮ ಮುಂದೆ ಇದೆ, ಆದಾಗ್ಯೂ ಮಾರ್ಗದಿಂದ ಅದನ್ನು ತೆಗೆದು ಹಾಕಲಾಗುತ್ತದೆ ಎಂಬ ಗಾಢ ನಂಬಿಕೆ ಇದೆ.*

**ಶ್ರೀಮಾತೆ:** ಗಾಢ ನಂಬಿಕೆ ಬಹಳ ನ್ಯಾಯ–ಸಮ್ಮತವಾದದ್ದು.

ಆ ಸಂದೇಶ ಇನ್ನೂ ನಿದ್ರೆ ಮಾಡುತ್ತಿರುವ ಹಾಗೂ ತಮ್ಮ ನಿದ್ರೆಯಿಂದ ಬಹಳ ಸಂತೃಪ್ತಿಯಿಂದಿರುವ ಜನರಿಗೆ ಮಾತ್ರವಿದೆ.

*

**ಪ್ರಶ್ನೆ:** *ನಿಮ್ಮ ಹೊಸ ವರ್ಷದ ಸಂದೇಶದಲ್ಲಿ ಹೇಳಲಾದ 'ಅಧೋಲೋಕ' ಇದರ ಅರ್ಥವೇನು? ಇಲ್ಲವೆ ಇನ್ನೊಂದು ರೀತಿಯಲ್ಲಿ ಕೇಳುವುದೇನೆಂದರೆ ಸಾಧಕ ಏನನ್ನು ಕುರಿತು ಭಯಪಡಬೇಕು?*

**ಶ್ರೀಮಾತೆ:** ಸದ್ಯದಲ್ಲಿಯೇ ಒಂದು ಭವ್ಯ ಉದ್ವಿಗ್ನತೆ ಇದೆ. ಅವರೆಲ್ಲರೂ ಯುದ್ಧವನ್ನು

ಪ್ರಾರಂಭಿಸಬೇಕೆಂಬ ನಿಲುವನ್ನು ಕೈಗೆತ್ತಿಕೊಂಡಿದ್ದಾರೆ. ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಅದು ಜನರ ಕುರುಡಾದ ಭಾವೋದ್ರೇಕವಾಗಿದೆ.

ಎಲ್ಲರ ತಳಹದಿಯಲ್ಲಿ ಭಯ, ಸರ್ವಸಾಧಾರಣ ಅವಿಶ್ವಾಸ ಮತ್ತು ಅವರು ನಂಬುವ ಅವರ ಆಸಕ್ತಿಗಳು (ಹಣ, ವ್ಯವಹಾರ)– ಈ ಮೂರು ವಿಷಯಗಳ ಸಂಯೋಜನೆ ಇದೆ. ಮನುಕುಲದ ಈ ಅತ್ಯಂತ ಕೆಳಮಟ್ಟದ ಮೂರು ಭಾವೋದ್ರೇಕಗಳನ್ನು ಲೀಲೆಯಲ್ಲಿ ತೊಡಗಿಸಿದಾಗ ನಾನು ಅದನ್ನು 'ಅಧೋಲೋಕ' ಎಂದು ಕರೆಯುತ್ತೇನೆ.

ಯಾರಾದರೂ ಒಮ್ಮೆ ತನ್ನ ಜೀವನವನ್ನು ಭಗವಂತನನ್ನು ಅರಸುವುದಕ್ಕಾಗಿ ನಿರ್ಧರಿಸಿದ್ದರೆ ಎಂದರೆ ಅವನ ನಿರ್ಧಾರ ನಿಷ್ಕಾಪಟ್ಯದ್ದಾಗಿದ್ದರೆ ಹಾಗೂ ಅದನ್ನು ನಿಷ್ಕಾಪಟ್ಯದಿಂದ ಕೊಂಡೊಯ್ದರೆ, ಆಗ ಅಲ್ಲಿ ಭಯಪಡುವಂತಹದೇನೂ ಇರುವುದಿಲ್ಲ, ಏಕೆಂದರೆ ಸಂಭವಿಸುತ್ತಿರುವುದೆಲ್ಲ ಹಾಗೂ ಸಂಭವಿಸಲಿರುವುದೆಲ್ಲ ಅವನನ್ನು ಈ ಸಿದ್ಧಿಯತ್ತ ಅತ್ಯಂತ ಚಿಕ್ಕ ಮಾರ್ಗದ ಮೂಲಕ ಕರೆದೊಯ್ಯುತ್ತದೆ.

ಅದೇ ದೈವೀ ಕೃಪೆಯು ಕೊಡುವ ಪ್ರತ್ಯುತ್ತರ. ದೈವೀಕೃಪೆಯ ಅರ್ಥ ನಿಮ್ಮ ಇಡೀ ಜೀವನಕ್ಕಾಗಿ ಎಲ್ಲವನ್ನೂ ಸುಗಮವಾದದ್ದನ್ನಾಗಿ ಮಾಡುವುದಾಗಿರುತ್ತದೆ ಎಂದು ಜನರು ನಂಬುತ್ತಾರೆ. ಅದು ಸತ್ಯವಾದದ್ದಲ್ಲ.

ದೈವೀಕೃಪೆ ನಿಮ್ಮ ಅಭೀಪ್ಸೆಯ ಸಿದ್ಧಿಗಾಗಿ ಕಾರ್ಯಮಾಡುತ್ತದೆ ಮತ್ತು ಪ್ರತಿಯೊಂದನ್ನು ಅತ್ಯಂತ ಶೀಘ್ರ ಹಾಗೂ ತೀವ್ರಗತಿಯ ಲಾಭ ಪಡೆಯುವಂತೆ ಮಾಡುತ್ತದೆ– ಹಾಗಾಗಿ ಭಯಪಡುವುದಕ್ಕೆ ಕಾರಣವಿರುವುದಿಲ್ಲ.

ಭಯ ಕಾಪಟ್ಯದೊಂದಿಗೆ ಬರುತ್ತದೆ. ನಿಮಗೆ ಸುಖ ಸೌಲಭ್ಯವಿರುವ ಜೀವನ, ಪ್ರಿಯವಾದ ಪರಿಸ್ಥಿತಿಗಳು ಇರುವ ಜೀವನ ಇತ್ಯಾದಿ ಬೇಕಾಗಿದ್ದರೆ, ನೀವು ಷರತ್ತುಗಳನ್ನಿರಿಸುತ್ತೀರಿ ಹಾಗೂ ಕಟ್ಟುಗಳನ್ನಿರಿಸುತ್ತೀರಿ ಮತ್ತು ಆಗ ನೀವು ಭಯಪಟ್ಟುಕೊಳ್ಳಬಲ್ಲಿರಿ.

ಆದರೆ ಸಾಧನೆಯಲ್ಲಿ ಅದರ ಯಾವ ವ್ಯವಹಾರವೂ ಇಲ್ಲ!

**CWM, 15/180-8** **- ಶ್ರೀಮಾತೆ**

*

## ದೈವೀ ಸತ್ಯದ ರಕ್ಷಕರು

ಅದು ಬಹಳ ಸ್ವಾರಸ್ಯಕರವಾದದ್ದು. ಹೊಸ ವರ್ಷಕ್ಕಾಗಿ ಕೊಟ್ಟ ಈ ಸಂದೇಶದ ಕಾರಣದಿಂದಾಗಿ (ಪ್ರತಿಯೊಬ್ಬನೂ, ಎಲ್ಲೆಡೆಯಲ್ಲಿ ಈ ಸಂದೇಶ ಕುರಿತು ಮಾತನಾಡುತ್ತಿದ್ದಾನೆ, ಅದು ದೊಡ್ಡ ಆಘಾತವನ್ನುಂಟು ಮಾಡಿದೆ, ಅದು ಎಲ್ಲೆಡೆಯಲ್ಲಿ, ಸರಕಾರಿ ವಲಯಗಳಲ್ಲಿಯೂ ಕೂಡ ಉಂಟಾಗಿದೆ.) ಪ್ರತಿಯೊಬ್ಬನೂ 'ದೈವೀ ಸತ್ಯದ ರಕ್ಷಕ' ನೆಂದು ಹಕ್ಕು ಸಾಧಿಸುತ್ತಿದ್ದಾನೆ. ಅವರು ನನಗೆ ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ತಾನು ಕಲ್ಪಿಸಿಕೊಂಡ ಸತ್ಯ ಜಗತ್ತಿನಲ್ಲಿ ಸ್ಥಾಪಿತಗೊಂಡಿಲ್ಲ ಎಂಬುದನ್ನು ಕೇಳಿ ಪ್ರತಿಯೊಬ್ಬನೂ ಆಶ್ಚರ್ಯಚಕಿತನಾಗುತ್ತಾನೆ. ಹಾಗಾಗಿ ಸತ್ಯದ ಎಲ್ಲ ಕಲ್ಪನೆಗಳ ವಿರುದ್ಧ ದೈವೀ ಸತ್ಯಕ್ಕಾಗಿ ನಾನು ಯುದ್ಧ ಕೈಕೊಳ್ಳಬೇಕಾದ ಒತ್ತಾಯಕ್ಕೊಳಗಾಗಲು ಪ್ರಾರಂಭಿಸಿದ್ದೇನೆ!

ದಿನದಿಂದ ದಿನಕ್ಕೆ ಅದು ಆ ರೀತಿಯದಾಗುತ್ತಿದೆ; ತೀಕ್ಷ್ಣವಾಗಿ ಬೆಳೆಯುತ್ತಿದೆ ಪ್ರತಿಯೊಬ್ಬನು "ದೈವೀ ಸತ್ಯದ ರಕ್ಷಕ" ನಾಗಿದ್ದಾನೆ. ಒಬ್ಬ ಆಹಾರ ಕುರಿತು, ಇನ್ನೊಬ್ಬ ಹಣ ಕುರಿತು, ಬೇರೊಬ್ಬ ವ್ಯವಹಾರ ಕುರಿತು, ಇನ್ನೂ ಬೇರೊಬ್ಬ ಸಂಬಂಧಗಳನ್ನು ಕುರಿತು– ಹೀಗೆ ಪ್ರತಿಯೊಬ್ಬನಿಗೂ ಅವನ ಆಟದ ಕುದುರೆಯಿದೆ.

ಆಶ್ಚರ್ಯಕರ ಸಂಗತಿ ಎಂದರೆ ಯಾರೂ ಈವರೆಗೆ "ಇರಬಹುದು. ನನ್ನ ಅಭಿಪ್ರಾಯಗಳು ಸತ್ಯವಾದವುಗಳಾಗಿರಲಿಕ್ಕಿಲ್ಲ" ಎಂದು ನನಗೆ ಹೇಳಿಲ್ಲ– ಒಬ್ಬನೂ ಇಲ್ಲ "ನಾನು ನೋಡುವ ಹಾಗೂ ಭಾವನೆಗೆ ತಂದುಕೊಳ್ಳುವ ರೀತಿ ಸತ್ಯವಾದದ್ದು ಆಗಿರಲಿಕ್ಕಿಲ್ಲ" ಎಂದು ಯಾರೊಬ್ಬನೂ ಹೇಳಿಲ್ಲ. ಅವರೆಲ್ಲರೂ ದೈವೀಸತ್ಯದೊಂದಿಗೆ ತುಂಬಿಕೊಂಡಿದ್ದಾರೆ!

ಅದು ಬಹಳ ಸ್ವಾರಸ್ಯಕರವಾದದ್ದು.

**ಪ್ರಶ್ನೆ:** *ಸತ್ಯವನ್ನು ರಕ್ಷಿಸುವವರು ಬಹಳಷ್ಟು ಸಲ ಆ ಸತ್ಯದ ವೈರಿಗಳಿಗಿಂತ ಹೆಚ್ಚು ಕೆಟ್ಟವರಾಗಿರುತ್ತಾರೆ.*

**ಶ್ರೀಮಾತೆ:** (ತಲೆದೂಗುತ್ತ ಒಪ್ಪಿಗೆ ನೀಡುತ್ತಾರೆ) ಅದನ್ನು ಕುರಿತು ನಾನು ಏನನ್ನೂ ಹೇಳಲಾರೆ, ಏಕೆಂದರೆ ಅದಕ್ಕೆ ಜವಾಬ್ದಾರಳಾದವಳು ನಾನೇ ಆಗಿದ್ದೇನೆ. 'ಸತ್ಯಕ್ಕೆ ಅಂಟಿಕೊಳ್ಳಿರಿ' ಎಂದು ನಾನು ಅವರಿಗೆ ಹೇಳಿದೆ.

ಇಲ್ಲ, ಅವರೆಲ್ಲರೂ ಅದೇ ತಪ್ಪನ್ನು ಮಾಡುತ್ತಾರೆ: ಸದ್ಗುಣ ಕುರಿತು ಇರುವ ಹಳೆಯ ವಿಚಾರದಿಂದ ಸತ್ಯ ಕುರಿತು ಗೊಂದಲಕ್ಕೀಡಾಗುತ್ತಾರೆ. ನೈತಿಕ ದೋಷವೇನೋ ಎಂಬಂತೆ ಅವರೆಲ್ಲರೂ ಅದೇ ತಪ್ಪನ್ನು ಮಾಡುತ್ತಾರೆ.

ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಅತಿ ಕಡಿಮೆ, ಬಹಳ ಸ್ಪಷ್ಟ ಹಾಗೂ ಸರಿಯಾಗಿ ವ್ಯಾಖ್ಯೆ ಕೊಡಲಾದ ಶಬ್ದಗಳಲ್ಲಿ ಅಭಿವ್ಯಕ್ತಗೊಂಡ ಸತ್ಯವನ್ನು ಅವರು ಬಯಸುತ್ತಾರೆ. ಹಾಗಾಗಿ ಅವರು "ಇದು ಸತ್ಯವಾದದ್ದು" ಎಂದು ಹೇಳಬಲ್ಲರು. ಧರ್ಮಗಳ ಹಳೆಯ ಅನಾಹುತ ಎಂದರೆ "ಇದು ಸತ್ಯವಾದದ್ದು"– ಹಾಗಾಗಿ ಉಳಿದದ್ದೆಲ್ಲ ಮಿಥ್ಯೆ ಎಂದು ಹೇಳುವುದಾಗಿದೆ.

ಶ್ರೀ ಅರವಿಂದರು ಹಾಗೂ ನಾನು ಬಹಳಷ್ಟು ಸಲ ಹೇಳಿದ್ದು ಹೀಗಿದೆ: "ಒಂದು ವಿಷಯ ಸತ್ಯವಾದದ್ದಾದಾಗ ಅದಕ್ಕೆ ವಿರುದ್ಧವಾದದ್ದೂ ಸತ್ಯವಾಗಿರುತ್ತದೆ ಎಂಬುದರ ಬಗ್ಗೆ ನೀವು ನಿಶ್ಚಿತತೆ ಹೊಂದಿರಬೇಕು. ಇದನ್ನು ನೀವು ತಿಳಿದುಕೊಂಡಾಗ ನೀವು ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತೀರಿ."

ಈ ದಿನ ಮುಂಜಾನೆ ನನ್ನ ಮೇಲೆ ಶ್ರೀ ಅರವಿಂದರ ಬರಹಗಳಲ್ಲಿರುವ ಉಲ್ಲೇಖವೊಂದನ್ನು ಕುರಿತು ಪ್ರಶ್ನೆಗಳನ್ನು ಮಳೆಗರೆಯಲಾಯಿತು.ಶ್ರೀಮಾತಾ (The Mother) ಪುಸ್ತಕದಲ್ಲಿ ಅವರು ಬರೆದಿದ್ದು ಹೀಗಿದೆ: "ದೈವೀ ಕೃಪೆ ದೈವೀ ಸತ್ಯದಲ್ಲಿ ಮಾತ್ರ ಕಾರ್ಯಕೈಕೊಳ್ಳಬಹುದು."– ಮತ್ತು ನಾನದನ್ನು ಮರೆಯಬಾರದು! (ಶ್ರೀಮಾತೆಯವರು ನಗುತ್ತಾರೆ.) ಶ್ರೀ ಅರವಿಂದರ ಬರಹಗಳಲ್ಲಿ ಇನ್ನೊಂದು ಉಲ್ಲೇಖವಿದೆ: "ದೃವೀಕೃಪೆ ಉತ್ತರ ನೀಡುತ್ತದೆ, ಆದರೆ ಅದು ಮಿಥ್ಯೆಯಲ್ಲಿ ಉತ್ತರ ನೀಡುತ್ತದೆಂದು ಯೋಚಿಸಬಾರದು." ಪ್ರಶಂಸಾರ್ಹ ವಾಕ್ಯ. ಕೇವಲ ಅವರು ತಿಳಿದುಕೊಂಡಿರುವುದಿಲ್ಲ: ಅವರು ದೈವೀ ಸತ್ಯವನ್ನು ವಶದಲ್ಲಿಕೊಂಡವರು – ಮಿಥ್ಯೆ ಇತರರಿಗಾಗಿ ಇದೆ! ಮತ್ತು ಬುದ್ಧಿವಂತ ಜನರು, ಮಿದುಳಿದ್ದವರು, ಅರ್ಥಮಾಡಿಕೊಳ್ಳುವವರು ಇವರೆಲ್ಲ ಕೂಡ ಅದೇ ಬೋನಿನಲ್ಲಿ ಬೀಳುತ್ತಾರೆ.

**ಅನುಯಾಯಿಯೊಂದಿಗೆ ಮಾತುಕತೆ, ಮಾರ್ಚ 22, 1967 – ಶ್ರೀಮಾತೆ**

*

ನಂತರ ದೈವೀ ಸತ್ಯ ಕುರಿತು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡುತ್ತ ಶ್ರೀಮಾತೆಯವರು ಬರೆದದ್ದು ಹೀಗಿದೆ: "ದೈವೀ ಸತ್ಯ ಒಮ್ಮೆ ಮತ್ತು ಎಲ್ಲ ಕಾಲಕ್ಕಾಗಿ ಕಲಿತುಕೊಳ್ಳಬಹುದಾದ ಹಾಗೂ ಅದನ್ನು ಹೇರಬಹುದಾದ ಮತ ತತ್ವವಲ್ಲ. ದೈವೀ ಸತ್ಯ ಪರಮೋಚ್ಚ ಪ್ರಭುವಿನ ಹಾಗೆ ಅನಂತವಾಗಿದೆ ಮತ್ತು ನಿಷ್ಕಪಟರಾದವರಿಗೆ ಹಾಗೂ ಲಕ್ಷ್ಯಗೊಡುವವರಿಗೆ ಪ್ರತಿಕ್ಷಣ ಪ್ರಕಟವಾಗುತ್ತ ಹೋಗುತ್ತದೆ."

ಎಲ್ಲರೂ ನೋಡುವಂತೆ ಹಾಗೂ ತಿಳಿದುಕೊಳ್ಳುವಂತೆ ದೈವೀ ಸತ್ಯ ಪ್ರಕಟವಾಗುವುದಿದ್ದರೆ, ಅವರು ತಮ್ಮ ಅಜ್ಞಾನದ ಅಗಾಧತೆ ಹಾಗೂ ಮಿಥ್ಯಾ ಸ್ವರೂಪದ ಅರ್ಥವಿವರಣೆ ಇವುಗಳಿಂದ ಭಯಭೀತರಾಗುತ್ತಾರೆ.

*

**ಅತಿಮಾನವ ಪ್ರಜ್ಞೆ (1969)**

**ಶಬ್ದಗಳು ಬೇಡ, ಕ್ರಿಯೆಗಳಿರಲಿ**

ಅದು ರಾತ್ರಿಕಾಲದಲ್ಲಿ ಸಾವಕಾಶವಾಗಿ ಬಂದಿತು. ಮತ್ತು ಈ ದಿನ ಬೆಳಿಗ್ಗೆ ನಾನು ಎಚ್ಚತ್ತುಕೊಂಡಾಗ ಅಲ್ಲಿ ಬಂಗಾರ ವರ್ಣದ್ದಾಗಿದೆಯೇನೋ ಎಂದೆನಿಸುವ ಅರುಣೋದಯವಿತ್ತು ಮತ್ತು ವಾತಾವರಣ ಬಹಳ ಹಗುರಾಗಿತ್ತು. "ಓಹ್, ಇದು ನಿಜವಾಗಿ... ಸತ್ಯವಾಗಿ ಹೊಸದಾದದ್ದು." ಬಂಗಾರ ವರ್ಣದ ದೈವೀ ಪ್ರಕಾಶ... ಉಪಕಾರ ಬುದ್ಧಿಯುಳ್ಳದ್ದು. ಒಂದು ನಿಶ್ಚಿತತೆ ಎಂಬ ಅರ್ಥದಲ್ಲಿ ಉಪಕಾರ ಬುದ್ಧಿಯದು – ಸಾಮರಸ್ಯವಿರುವ ನಿಶ್ಚಿತತೆ.

ಅದು ಹೊಸದಾದದ್ದಾಗಿತ್ತು.

ಹಾಗಾಗಿ ಅಲ್ಲಿ.

ನಾನು "ಸಂತೋಷಕರ ಹೊಸ ವರ್ಷ" (Happy New Year) ಎಂದು ಜನರಿಗೆ ಹೇಳಿದಾಗ ನಾನು ಅದೇ ಅವರೆಡೆಗೆ ಸಾಗಿ ಹೋಗುವಂತೆ ಮಾಡುತ್ತೇನೆ. ಮತ್ತು ಈ ದಿನ ಬೆಳಿಗ್ಗೆ ಸ್ವಯಂಪ್ರೇರಣೆಯಿಂದ "ಸಂತೊಷಕರ ಹೊಸ ವರ್ಷ" ಎಂದು ಹೇಳುತ್ತ ನನ್ನ ಸಮಯವನ್ನು ಕಳೆದೆ.

*

ಅದು ವರ್ಷದ ಪ್ರಾರಂಭ ಕಾಲವಾಗಿತ್ತು. ದೇವನ ಶ್ರೇಣಿಯಲ್ಲಿರುವ ಯಾರೋ ಒಬ್ಬರು "ಸಂತೋಷಕರ ವರ್ಷ" ಎಂದು ಹೇಳಲು ಅದನ್ನು ಸಂತೋಷಕರ ವರ್ಷವನ್ನಾಗಿ ಮಾಡುವ ಎಲ್ಲ ಸಾಮರ್ಥ್ಯದೊಂದಿಗೆ ಬಂದ ಹಾಗಿತ್ತು. ಅದು ಆ ರೀತಿಯದಾಗಿತ್ತು.

ಅದು ಪ್ರಕಾಶಮಯವಾಗಿತ್ತು, ಮುಗುಳ್ನಗುತ್ತಿತ್ತು, ಅದರ ಸಾಮರ್ಥ್ಯದಿಂದಾಗಿ ಅಷ್ಟೊಂದು ಉಪಕಾರಬುದ್ಧಿಯುಳ್ಳದ್ದಾಗಿತ್ತು: ನಾನು ಹೇಳುವುದರ ಅರ್ಥ ಸರ್ವಸಾಧಾರಣವಾಗಿ ಮನುಷ್ಯನಲ್ಲಿಯ ಉಪಕಾರ ಬುದ್ಧಿ ಸ್ವಲ್ಪ ದುರ್ಬಲವಾದ ಏನೋ ಒಂದು, ಯಾವ ಅರ್ಥದಲ್ಲಿ ಎಂದರೆ ಅದು ಸಮರವನ್ನು, ಹೋರಾಟವನ್ನು ಇಷ್ಟಪಡುವುದಿಲ್ಲ... ಆದರೆ ಇದು ಹಾಗಿರಲೇ ಇಲ್ಲ! ತನ್ನನ್ನು ಹೇರುವ ಒಂದು ಉಪಕಾರ ಬುದ್ಧಿ (ಶ್ರೀಮಾತೆಯವರು ತಮ್ಮ ಮುಷ್ಠಿಗಳನ್ನು ಕುರ್ಚಿಯಲ್ಲಿ ಕೈಗಳನ್ನಿರಿಸುವುದಕ್ಕೆ ಇರುವ ಭಾಗದ ಮೇಲೆ ಕೆಳಗೆ ತಂದಿರಿಸುತ್ತಾರೆ.)

ಅದು ಇಡಿಯಾಗಿ ಹೊಸದಾಗಿದ್ದುದರಿಂದ ನನ್ನಲ್ಲಿ ಅಭಿರುಚಿಯನ್ನುಂಟು ಮಾಡಿತು. ಅದು ಎಷ್ಟೊಂದು ಮೂರ್ತರೂಪದ್ದಾಗಿತ್ತು! (ಶ್ರೀಮಾತೆಯವರು ಕುರ್ಚಿಯ ಕೈಗಳನ್ನು ಸ್ಪರ್ಶಿಸುತ್ತಾರೆ), ಹೀಗೆ "ಇತರರು" ಎಂದು ಭೌತಿಕ ಪ್ರಜ್ಞೆ ಸಾಮಾನ್ಯವಾಗಿ ಪರಿಗಣಿಸುವ ರೀತಿಯದಾಗಿತ್ತು, ಅಷ್ಟೊಂದು ಮೂರ್ತರೂಪದ್ದಾಗಿತ್ತು. ಅದರರ್ಥ ಅದು ಯಾವುದೋ ಅಂತರಂಗದ ಸತ್ತೆಯಿಂದ ಬಂದಿರಲಿಲ್ಲ, ಚೈತ್ಯ ಸತ್ತೆಯಿಂದ ಬಂದಿರಲಿಲ್ಲ; ಅದು ನೇರವಾಗಿ ದೇಹದ ಮೇಲೆ ಬಂದಿತ್ತು.

ದೌರ್ಬಲ್ಯ ಹಾಗೂ ಛಾಯೆಗಳಿರದ ಒಬ್ಬ ಮಾನವ: ಅದೆಲ್ಲವೂ ಪ್ರಕಾಶಮಾನವಾಗಿತ್ತು – ಎಲ್ಲ ಪ್ರಕಾಶ ಹಾಗೂ ಮುಗುಳ್ನಗು ಮತ್ತು ಅದೇ ಸಮಯದಲ್ಲಿ ಮಾಧುರ್ಯ ಇವೆಲ್ಲ ಇದ್ದವು.

**ಅನುಯಾಯಿಯೊಂದಿಗೆ ಮಾತುಕತೆ: ಜನವರಿ 1–4–1969 – ಶ್ರೀಮಾತೆ**

*



**ನಿಮ್ಮ ಪ್ರಜ್ಞೆಯನ್ನು ವಿಶಾಲವಾಗುವಂತೆ ಮಾಡಿರಿ (1973)**

**ಒಂದೇ ಸಮಯದಲ್ಲಿ ನೀವು ಇಡೀ ಜಗತ್ತಿನ ಬಗ್ಗೆ ಪ್ರಜ್ಞೆಯುಳ್ಳವರಾದರೆ ಆಗ ಭಗವಂತನ ಬಗ್ಗೆ ಪ್ರಜ್ಞೆಯುಳ್ಳವರಾಗುತ್ತೀರಿ.**

ಜಗತ್ತಿನ ಬಗ್ಗೆ ಪ್ರಜ್ಞೆಯುಳ್ಳವರಾಗುವುದರಿಂದ ಸ್ವಯಂಚಾಲಿತವಾಗಿ ನೀವು ಭಗವಂತನ ಬಗ್ಗೆ ಅರಿವುಳ್ಳವರಾಗುತ್ತೀರಿ ಎಂದು ನಾನು ಹೇಳುವುದರ ಅರ್ಥವಲ್ಲ, ಆದರೆ ನಿಮ್ಮ ಪ್ರಜ್ಞೆ ನೋಡಲು ಸಾಕಷ್ಟು ವಿಶಾಲವಾದದ್ದು ಮತ್ತು ಇಡೀ ಜಗತ್ತಿನ ಬಗ್ಗೆ ಪ್ರಜ್ಞೆಯುಳ್ಳದ್ದು ಆದಾಗ (ಭಗವಂತನನ್ನು ನೋಡಲು) ನಿಮ್ಮಲ್ಲಿ ಕ್ಷಮತೆಯಿರುತ್ತದೆ.

ಅದನ್ನು ನಾನು ಹೇಗೆ ಹೇಳಲಿ? – ನಾನು ಬಹಳ ನಿಷ್ಕೃಷ್ಟವಾಗಿ ಹೇಳಲು ಬಯಸುವುದಿಲ್ಲ. ಪ್ರತಿಯೊಬ್ಬನು ತನ್ನ ಕ್ಷಮತೆಗನುಸಾರವಾಗಿ ತಿಳಿದುಕೊಳ್ಳಲಿ ಎಂದು ಬಯಸುತ್ತೇವೆ– ಅರ್ಥವಾಯಿತೆ? ನಾನು ಹೇಳಿದ್ದುದರ ಅರ್ಥ ನಿನಗಾಯಿತೆ?

**ಪ್ರಶ್ನೆ:** *ಶ್ರೀಮಾತೆಯವರೆ, ಆಗಿದೆ.*

**ಶ್ರೀಮಾತೆ:** ಮೇಲ್ಮೈ ಪ್ರಜ್ಞೆಯೊಂದಿಗಿರುವ ಮನುಷ್ಯ ಆ ರೀತಿಯಲ್ಲಿ ತಿಳಿದುಕೊಳ್ಳುತ್ತಾನೆ. ಆದರೆ ಆಳಾತಿ ಆಳದ ಪ್ರಜ್ಞೆಯಿದ್ದವನು ನಿಜವಾದ ಅರ್ಥವನ್ನು ತಿಳಿದುಕೊಳ್ಳುತ್ತಾನೆ.

**ಅನುಯಾಯಿಯೊಂದಿಗೆ ಮಾತುಕತೆ: ಸಪ್ಟಂಬರ 13, 1972 – ಶ್ರೀಮಾತೆ**

*

**ಡಿಸೆಂಬರ 30,1972**

ಹೀಗೆ ಅದು ಹೊಸ ವರ್ಷವಾಗಲಿದೆ

(ಸ್ವಲ್ಪ ಕಾಲ ಮೌನದಿಂದ ಇದ್ದ ನಂತರ) ವಿಷಯಗಳು ಪರಮಾವಧಿಯ ರೂಪ ತಾಳಿವೆ. ಹಾಗಾಗಿ ಬಹುಮಟ್ಟಿಗೆ ಊಹಿಸಲಾಗದ ಭವ್ಯತೆಯೊಂದರತ್ತ, ವಾತಾವರಣದ ಆಧ್ಯಾತ್ಮಿಕವಾಗಿ ಉದ್ಧಾರಗೊಳಿಸುವ ಪ್ರಭಾವ ಅಲ್ಲಿದ್ದ ಹಾಗಿದೆ ಮತ್ತು ಅದೇ ಕಾಲಕ್ಕೆ ಯಾವುದೇ ಕ್ಷಣದಲ್ಲಿ ಮೃತ್ಯುವನ್ನಪ್ಪಬಹುದು ಎಂಬ ಭಾವನೆಯಿದೆ.– ಮೃತ್ಯುವನ್ನಪ್ಪುವುದಲ್ಲ, ಆದರೆ ದೇಹ ಕರಗಿ ಹೋಗಬಹುದು. ಮತ್ತು ಹಾಗಾಗಿ ಅವೆರಡೂ ಒಂದೇ ವೇಳೆಗೆ ಒಂದು ಪ್ರಜ್ಞೆಯನ್ನು ರೂಪಿಸಬಹುದು. (ಶ್ರೀಮಾತೆಯವರು ತಲೆಯನ್ನು ಅಲ್ಲಾಡಿಸುತ್ತಾರೆ.).... ಎಲ್ಲ ಹಳೆಯ ವಿಷಯಗಳು ಕ್ಷುಲ್ಲಕ, ಬಾಲಿಶ ಹಾಗೂ ಅಪ್ರಜ್ಞೆಯವು ಎಂದು ತೋರಿಬರುತ್ತವೆ,– ಅಲ್ಲಿ ಅಂತರಂಗದಲ್ಲಿ ಅದು ಭಯವಿಸ್ಮಿತಗೊಳಿಸು–ವಂತಹದಾಗಿದೆ, ಆಶ್ಚರ್ಯಕರವಾಗಿದೆ.

ಹಾಗಾಗಿ ದೇಹ ಒಂದು ಪ್ರಾರ್ಥನೆಯನ್ನಿರಿಸಿಕೊಂಡಿದೆ– ಮತ್ತು ಅದು ಯಾವಾಗಲೂ ಅದೇ ಆಗಿರುತ್ತದೆ:

ದೈವಿಕನಾದ ನಿನ್ನನ್ನು ತಿಳಿದುಕೊಳ್ಳಲು ನಾನು ಯೋಗ್ಯಳಾಗುವಂತೆ ಮಾಡು,
ದೈವಿಕನಾದ ನಿನಗೆ ಸೇವೆ ಸಲ್ಲಿಸಲು ನಾನು ಯೋಗ್ಯಳಾಗುವಂತೆ ಮಾಡು.
ದೈವಿಕನಾದ ನೀನು ನಾನಾಗಲು ಯೋಗ್ಯಳಾಗುವಂತೆ ಮಾಡು.
ನನ್ನೊಳಗೆ ಒಂದು ಬೆಳೆಯುತ್ತಿರುವ ಶಕ್ತಿಯ ಭಾವನೆ ನನಗೆ ಬರುತ್ತಿದೆ....

ಆದರೆ ಅದರ ಗುಣಲಕ್ಷಣ ಹೊಸದಾಗಿದೆ... ಅದು ನಿಶ್ಚಲ ನೀರವತೆಯಲ್ಲಿ ಹಾಗೂ ಧ್ಯಾನದಲ್ಲಿ ಬೆಳೆಯುತ್ತಿದೆ. ಯಾವುದೂ ಅಸಾಧ್ಯವಾಗಿರುವುದಿಲ್ಲ. (ಶ್ರೀಮಾತೆಯವರು ತಮ್ಮ ಹಸ್ತಗಳನ್ನು ಮೇಲ್ಗಡೆ ತೆರೆದಿರಿಸುತ್ತಾರೆ.)

**CWM, 11/330** **- ಶ್ರೀಮಾತೆ**

*

**ಹೊಸ ವರ್ಷಕ್ಕಾಗಿ ಸಂದೇಶ**

**ಪ್ರಶ್ನೆ:** *ಶ್ರೀಮಾತೆಯವರೆ, ಪ್ರತಿವರ್ಷ ಜನವರಿ 1ರಂದು ನೀವು ಸಂದೇಶವೊಂದನ್ನು ಕೊಡುತ್ತೀರಿ. ಅದು ನಿಖರವಾಗಿ ಏನನ್ನು ತಿಳಿಯಪಡಿಸುತ್ತದೆ?*

**ಶ್ರೀಮಾತೆ:** ಹೌದು, ಪ್ರತಿ ವರ್ಷ... ಯುದ್ಧ ನಡೆಯುತ್ತಿದ್ದಾಗ ಅದು ಅದ್ಭುತ–ವಾಗಿರುತ್ತಿತ್ತು. ಏನು ಬರಲಿರುವುದು ಎಂಬುದರ ಭವಿಷ್ಯಕಥನದ ಹಾಗಿರುತ್ತಿತ್ತು. ಈಗ ಅಲ್ಲಿ ಯಾವ ಯುದ್ಧವೂ ಇಲ್ಲದೇ ಇರುವುದರಿಂದ ಭವಿಷ್ಯಕಥನದ ಆವಶ್ಯಕತೆ ಇರುವುದಿಲ್ಲ! ಆದರೆ ಅದು ಯಾವಾಗಲೂ ಕೈಕೊಳ್ಳಬೇಕಾದ ಪ್ರಗತಿಯನ್ನು ಕುರಿತು ಒಂದು ಸೂಚನೆಯಾಗಿರುತ್ತದೆ. ನೀವದನ್ನು ನಾಳೆ ಬೆಳಿಗ್ಗೆ ಸ್ವೀಕರಿಸಲಿರುವಿರಿ, ಅದು ಒಂದು ಪ್ರಾರ್ಥನೆಯ ರೂಪದಲ್ಲಿದೆ. ಆದರೆ ಅದನ್ನು ಕುರಿತು ಆಳವಾಗಿ ಚಿಂತನ ಮಾಡಿರೆಂದು ನಾನು ನಿಮಗೆ ಉಪದೇಶಿಸುತ್ತೀದ್ದೇನೆ. ಏಕೆಂದರೆ ಅದನ್ನು ಮಾತಿನಲ್ಲಿ ಹೇಳಲಾಗಿತ್ತು ಹಾಗೂ ಭವ್ಯ ಮಹತ್ವ ಹೊಂದಿದ್ದೆಂದು ಪರಿಗಣಿಸಲಾಗಿತ್ತು. ಸದ್ಯ ನಾವು ಸಾರ್ವಜನಿಕ ಆಸಕ್ತಿಯ ಒಂದು ವಿಷಯವಾಗುತ್ತಿದ್ದೇವೆ. ಯಾವ ಅರ್ಥದಲ್ಲಿ ಎಂದರೆ ಆಶ್ರಮಕ್ಕೆ ಬರುವ ಬಹಳಷ್ಟು ಭೇಟಿಗಾರರಿರುತ್ತಾರೆ, ನಾವಿಲ್ಲಿ ಏನು ಕೈಕೊಳ್ಳುತ್ತಿದ್ದೇವೆ ಎಂಬುದನ್ನು ಕುರಿತು ಆಸ್ಥೆಯುಳ್ಳವರಾಗಿರುತ್ತಾರೆ ಮತ್ತು ಆಗ ಅವರನ್ನು ಸುತ್ತಮುತ್ತ ಕರೆದು–ಕೊಂಡು ಹೋಗಿ ನಾವು ಕೈಕೊಂಡದ್ದೇನು, ಮುಂದೇನು ಕೈಕೊಳ್ಳುವವರಿದ್ದೇವೆ ಇತ್ಯಾದಿ ವಿಷಯಗಳನ್ನು ಅವರಿಗೆ ಹೇಳುವುದಿರುತ್ತದೆ “ನಾನು ಬೇಡಿಕೊಂಡು ಹೇಳುತ್ತೇನೆ, ನಾವೇನು ಕೈಕೊಳ್ಳುತ್ತಿದ್ದೇವೆ ಎಂಬುದನ್ನು ಕುರಿತು ಅಷ್ಟೊಂದು ಮಾತನಾಡುವುದು ಬೇಡ, ಕಾರ್ಯವನ್ನು ಕೈಕೊಳ್ಳುತ್ತಿರಬೇಕು” ಎಂದು ಹೇಳಬೇಕಾದ ನಿಜವಾದ ದೊಡ್ಡ ಆವಶ್ಯಕತೆ ಅಲ್ಲಿತ್ತು. ಅಷ್ಟೇ.

ಮಾತನಾಡುವುದಕ್ಕಿಂತ ಕಾರ್ಯಕೈಕೊಳ್ಳುತ್ತಿರುವುದು ಯಾವಾಗಲೂ ಹೆಚ್ಚು ಒಳ್ಳೆಯದು, ಕನಿಷ್ಠ ವಿವರಗಳನ್ನು ಕೊಡುವುದೂ ಬೇಡ.

ಹೆಚ್ಚು ಆಳವಾದ ಇನ್ನೊಂದು ಅರ್ಥವೂ ಅಲ್ಲಿದೆ. ಆದರೆ ಅದನ್ನು ಕುರಿತು ನಿಮಗೆ ಇನ್ನೊಂದು ಸಮಯದಲ್ಲಿ ಮಾತನಾಡಿ ಹೇಳುತ್ತೇನೆ.

ನನ್ನ ಮಕ್ಕಳೇ ನಿಮಗೆ ಕುಶಲವಾಗಲಿ.

**CWM, 5/417** **- ಶ್ರೀಮಾತೆ**

*

**ಹೊಸ ವರ್ಷಕ್ಕಾಗಿ ಸಂಗೀತ**

(ಹೊಸ ವರ್ಷಕ್ಕಾಗಿ ಸುನೀಲನ ಸ್ವರಪ್ರಸ್ತಾರವಿರುವ ಸಂಗೀತವನ್ನು ಕೇಳಿದ ನಂತರ)

**ಶ್ರೀಮಾತೆ:** ಅದು ನಿನಗೆ ಇಷ್ಟವಾಯಿತೆ?

**ಅನುಯಾಯಿ:** ಬಹಳ ಸುಂದರವಾಗಿದೆ, ಬಹಳ ಸಾಮರ್ಥ್ಯಪೂರ್ಣವಾಗಿದೆ.

**ಶ್ರೀಮಾತೆ:** ಹೌದಲ್ಲವೆ? ಅದು ಒಂದು ವಾತಾವರಣವನ್ನು ಸೃಷ್ಟಿಸುತ್ತದೆ.

ಸಾಮಾನ್ಯವಾಗಿ ನಾನು ಅವನಿಗಾಗಿ ಸ್ವಲ್ಪ ಸಂಗೀತ ನುಡಿಸುತ್ತೇನೆ, ಮತ್ತು ಅವನು ಅದರಿಂದ ಸ್ವರಪ್ರಸ್ತಾರ ರಚಿಸುತ್ತಾನೆ. ಅದರೆ ಈ ಸಲ ನಾನು ಅದನ್ನು ಕೈಕೊಂಡಿಲ್ಲ. ಹಾಗಾಗಿ ಅವನು ಸ್ವಲ್ಪ ಹಳೆಯ ತುಂಡುಗಳನ್ನು ಕೈಗೆತ್ತಿಕೊಂಡ, ಅವುಗಳ ಸಂಪರ್ಕದಲ್ಲಿ ಬಂದು ಸ್ವರಪ್ರಸ್ತಾರ ರಚಿಸುತ್ತಾನೆ.

ಅಮೇರಿಕನ್ ಸಂಗೀತಕಾರನೊಬ್ಬ ಇಲ್ಲಿಗೆ ಬಂದಿದ್ದಾನೆ. ನಾನು ಅವನನ್ನು ಸುನೀಲನ ಬಳಿ ಕಳಿಸಿಕೊಟ್ಟೆ. ಅವನು ಅಮೇರಿಕಾದಲ್ಲಿ ಸುನೀಲನ ಸಂಗೀತವನ್ನು ಸ್ವಲ್ಪ ಮಟ್ಟಿಗೆ ಕೇಳಿದ್ದಾನೆ, ಮತ್ತು ಮೊದಲಿಗೆ ಜನರು ಒಂದಿಷ್ಟು ದಿಗ್ಭ್ರಮೆಗೊಳಗಾಗುತ್ತಾರೆ, ಆದರೆ ಅದನ್ನು ಹಲವಾರು ಸಲ ಕೇಳಿದ ನಂತರ ಅವರು ಬಹಳ ಉತ್ಸಾಹಭರಿತರಾಗುತ್ತಾರೆ.

ನನ್ನನ್ನು ಕುರಿತು ಹೇಳುವುದಾದರೆ ಅದು ಒಂದು ವಾತಾವರಣವನ್ನು ಸೃಷ್ಟಿಸುವುದನ್ನು ನಾನು ನೋಡುತ್ತೇನೆ. ಅದು ವಾತಾವರಣವನ್ನು ಕೆಳಗಿಳಿಸಿ ತರುತ್ತದೆ.

ಮತ್ತು ಮಾನವ ಧ್ವನಿ ಬಹಳ ಸೊಗಸಾಗಿರುತ್ತದೆ, ಸರಿಯಾಗಿ ಬೆರಕೆಯಾಗಿರುತ್ತದೆ.

**ಅನುಯಾಯಿಯೊಡನೆ ಮಾತುಕತೆ: ಡಿಸೆಂಬರ 28, 1968 – ಶ್ರೀಮಾತೆ**

*

## ವಾರ್ತಾಪತ್ರ


### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 5ನೇ ಡಿಸೆಂಬರ್ 2017ರ ಮಂಗಳವಾರದಂದು "ಶ್ರೀ ಅರವಿಂದರ ಮಹಾಸಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.00 ಗಂಟೆಯಿಂದ 7.30ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು

ವಿತರಿಸಲಾಯಿತು. ನಂತರ ಸಾಯಂಕಾಲ 5.00 ರಿಂದ 7.00 ಗಂಟೆಯವರೆಗೆ ಶ್ರೀ ಶ್ರದ್ಧಾಳು ರಾನಡೆರವರ "SUPRAMENTAL CONSCIOUSNESS and human evolution" ವಿಷಯದ ಬಗ್ಗೆ ವೀಡಿಯೋ ಚಿತ್ರಣವನ್ನು ಪ್ರದರ್ಶಿಸಲಾಯಿತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 9ನೇ ಡಿಸೆಂಬರ್ 2017ರ ಶನಿವಾರ ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯು ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ಕ್ರೀಡಾ ಕೂಟವನ್ನು ಬೆಳಿಗ್ಗೆ 8.30 ರಿಂದ 10.00 ಗಂಟೆಯವರೆಗೆ ಆಯೋಜಿಸಲಾಗಿತ್ತು. ಕ್ರೀಡಾ ಕೂಟದಲ್ಲಿ ವಿದ್ಯಾರ್ಥಿಗಳು ಸಂಭ್ರಮದಿಂದ ಭಾಗವಹಿಸಿ ವಿವಿಧ ಕ್ರೀಡಗಳಲ್ಲಿ ಪಾಲ್ಗೊಂಡು ಬಹುಮಾನ ಪಡೆದರು. ನಂತರ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಅದೇ ದಿನ ಸಂಜೆ 4.00 ಗಂಟೆಗೆ ಮಾಧ್ಯಮಿಕ ತರಗತಿಯಿಂದ ಪ್ರೌಢ ತರಗತಿ ಮಕ್ಕಳಿಗೆ ಕ್ರೀಡಾ ಕೂಟವನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಡಾ॥ ಎಸ್. ಪ್ರಭಾಕರನ್, ವಿಜ್ಞಾನಿ (ಡಿ.ಆರ್.ಡಿ.ಓ.) ಮತ್ತು ಗೌರವ ಅತಿಥಿಗಳಾಗಿ ಶ್ರೀ ವಿಜಯಕುಮಾರ್ ಬಿ.ಎನ್. ಶಾಸಕರು, ಜಯನಗರ ವಿಧಾನ ಸಭಾಕ್ಷೇತ್ರ ಮತ್ತು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್‌ರವರು ವೇದಿಕೆ ಮೇಲೆ ಉಪಸ್ಥಿತರಿದ್ದು ಪಥ ಸಂಚಲನ ಮತ್ತು ದೇಶೀ ಕ್ರೀಡೆಗಳ ಅಂತಿಮ ಹಂತದ ಆಟಗಳನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ 2016–17ರ ಶೈಕ್ಷಣಿಕ ಸಾಲಿನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಮುಖ್ಯ ಅತಿಥಿಗಳು ಸನ್ಮಾನಿಸಿದರು. ಶಾಲೆಯ ಅತ್ಯುನ್ನತ "ಆರೋ ಪ್ರಶಸ್ತಿ"ಯನ್ನು ಸಹ ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಗುರುತಿಸಿ ನೀಡಲಾಯಿತು. ನಂತರ ವಿದ್ಯಾರ್ಥಿಗಳು ದೇಶೀ ಸ್ಪರ್ಶತೆಯಿಂದ ಕೂಡಿದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕಾರ್ಯಕ್ರಮವನ್ನು ವೀಕ್ಷಿಸಿದ ಮುಖ್ಯ ಆತಿಥಿಗಳು, ಪೋಷಕರು ಎಲ್ಲರೂ ವಿದ್ಯಾಥಿಗಳ ಪರಿಶ್ರಮ ಮತ್ತು ಅಚ್ಚುಕಟ್ಟಾದ ಪ್ರದರ್ಶನಕ್ಕಾಗಿ ವಿದ್ಯಾರ್ಥಿಗಳನ್ನು ಶ್ಲಾಘಿಸಿದರು. ಶಾಲಾ ಶಿಕ್ಷಕಿಯರು ಕಾರ್ಯಕ್ರಮವನ್ನು ನಿರೂಪಿಸಿದರು. ವಂದೇಮಾತರಂ ಗೀತೆಯೊಂದಿಗೆ ವಾರ್ಷಿಕ ಕ್ರೀಡಾ ಕೂಟ ಮುಕ್ತಾಯವಾಯಿತು.



*Courage their armour,*
*faith their sword, they must walk.*
*Heroes and soldiers of the army of Light...*

- Sri Aurobindo

**RNI No. 22511/1971**
No. of Pages **40 + 4 (Cov. Page)**
KAR Reg No : RNP/KA/BGS/368/2018-2020
Date of Publication on 7th of Every Month
Permitted to Post 10th of Every Month. Reg. Valid till : 31-12-2020
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ಅತಿಥಿ ಗೃಹ ಸೌಲಭ್ಯವಿರುತ್ತದೆ. ಶ್ರೀಮಾತಾರವಿಂದರ ಭಕ್ತರು, ಗುರು-ಬಂಧುಗಳು, ಸದಸ್ಯರು ಮತ್ತು ಕೇಂದ್ರ ಹಾಗೂ ಶಾಖೆಗಳ ಪದಾಧಿಕಾರಿಗಳಿಗೆ ಸೌಲಭ್ಯದಲ್ಲಿ ರಿಯಾಯತಿ ಪಡೆಯಬೇಕಾದಲ್ಲಿ ಮುಂಚಿತವಾಗಿ ತಿಳಿಸುವುದು. ಸದಸ್ಯರು ಚಾಲ್ತಿಯಲ್ಲಿರುವ ತಮ್ಮ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಂದಿರಬೇಕಾಗುತ್ತದೆ.

**ಸಂಪರ್ಕಿಸಬೇಕಾದ ವಿಳಾಸ:**

ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ, ಬೆಂಗಳೂರು – 560 078.
ದೂರವಾಣಿ: 080 – 22339882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.